ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಆಗಸ್ಟ್ 20, 2021

ಸಂಪುಟ : 48 ಸಂಚಿಕೆ : 98 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com

## ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಸಂಸದರ ಸೂಚನೆ

ದಾವಣಗೆರೆ,ಆ.19- ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಗೆ ಸಂಬಂಧಿಸಿದ ರಸ್ತೆ ಕಾಮಗಾರಿಗಳಲ್ಲಿ ಕಳಪೆ ಕಂಡುಬಂದಲ್ಲಿ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಸಂಸದ ಡಾ. ಜಿ.ಎಂ. ಸಿದ್ದೇಶ್ವರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಗುರುವಾರ 75ನೇ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವದ ಅಂಗವಾಗಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.




ಗುತ್ತಿಗೆದಾರರು ಟೆಂಡರ್ ಮೊತ್ತದಲ್ಲಿ ಶೇ.10-15 ರಷ್ಟು ಕಡಿಮೆ ಟೆಂಡರ್ ಹಾಕಿಸುವುದರಿಂದ ಗುಣಮಟ್ಟದ ಕಾಮಗಾರಿ ಮಾಡಲು ಸಾಧ್ಯವಾಗದೆ, ಕಾಮಗಾರಿಗಳು ಕಳಪೆಯಾಗಿರುತ್ತವೆ. ಆದ್ದರಿಂದ ಇಂಜಿನಿಯರ್‌ಗಳು, ಕಂಟ್ರ್ಯಾಕ್ಟರ್‌ಗಳು ನಿಯಮಗಳನ್ನು ಸರಿಯಾಗಿ ಪರಿಪಾಲನೆ ಮಾಡಬೇಕು. ಅಧಿಕಾರಿಗಳು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸರಿಯಾಗಿ ಪರಿಶೀಲಿಸಬೇಕು. ಒಂದು ವೇಳೆ ಕಳಪೆಯಾದಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಸಾಧ್ಯವಾದಲ್ಲಿ ಇಂತಹ ಕಾಮಗಾರಿಗಳ ಟೆಂಡರ್ ಮೊತ್ತಕ್ಕೆ ಶೇ. 15 ಕ್ಕಿಂತ ಕಡಿಮೆ ದರ ನಮೂದಿಸಿದ ಟೆಂಡರ್‌ಗಳನ್ನು ಪುನರ್ ಪರಿಶೀಲಿಸಿ, ಗುಣಮಟ್ಟದ ಕಾಮಗಾರಿ ಕೈಗೊಳ್ಳುವವರಿಗೆ ಟೆಂಡರ್ ನೀಡಬೇಕು. ಇದರಿಂದ ಗುಣಮಟ್ಟದ ಕಾಮಗಾರಿಗಳನ್ನು ಮಾಡಲು ಸಾಧ್ಯ. ಉತ್ತಮ ಕಾಮಗಾರಿಗಳನ್ನು ಕೈಗೊಂಡು ಜಿಲ್ಲೆಯನ್ನು ಅಭಿವೃದ್ಧಿಪಡಿಸಲು ಸರ್ಕಾರದ ಅನೇಕ ಯೋಜನೆಗಳನ್ನು ತರಲಾಗುತ್ತಿದೆ, ಸಾಕಷ್ಟು ಹಣ ವ್ಯಯ ಮಾಡಲಾಗುತ್ತಿದೆ. ಅದನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಕಾಮಗಾರಿ ನಿರ್ಮಾಣಕ್ಕೆ ಎಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಜಿ.ಪಂ. ಉಪಕಾರ್ಯದರ್ಶಿ ಆನಂದ್ ಸೇರಿದಂತೆ ವಿವಿಧ ಅಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

## ರಾಜ್ಯದ 2,859 ಆರೋಗ್ಯ ಉಪಕೇಂದ್ರ ಮೇಲ್ದರ್ಜೆಗೆ

### ಕೊರೊನಾ 3ನೇ ಅಲೆ ಹಿನ್ನೆಲೆಯಲ್ಲಿ ಮಹತ್ವದ ನಿರ್ಧಾರ

ಬೆಂಗಳೂರು, ಆ. 19 - ಕೊರೊನಾ ಸಂಭಾವ್ಯ ಮೂರನೆ ಅಲೆ ಎದುರಿಸಲು 2,859 ಆರೋಗ್ಯ ಉಪಕೇಂದ್ರಗಳನ್ನು ಮೇಲ್ದರ್ಜೆಗೇರಿಸಿ ಮೂಲಸೌಕರ್ಯ ಕಲ್ಪಿಸಲು ರಾಜ್ಯ ಸಚಿವ ಸಂಪುಟ ಮಹತ್ವದ ತೀರ್ಮಾನ ಕೈಗೊಂಡಿದೆ.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಜೆ.ಸಿ. ಮಾಧುಸ್ವಾಮಿ, ಈ ಯೋಜನೆಗೆ 478 ಕೋಟಿ ರೂ. ವೆಚ್ಚವಾಗಲಿದ್ದು, ಇದರಲ್ಲಿ ಶೇ. 50 ರಷ್ಟನ್ನು ಕೇಂದ್ರ ಸರ್ಕಾರ ಭರಿಸಲಿದೆ, ಉಳಿದ 278 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ನೀಡಲಿದೆ ಎಂದರು.

ರಾಜ್ಯದಲ್ಲಿ ಕೊರೊನಾ ಸೋಂಕು ತಕ್ಕಮಟ್ಟಿಗೆ ಹತೋಟಿಯಲ್ಲಿದೆ, ಈ ಹಿಂದಿನ ಅನುಭವದ ಹಿನ್ನೆಲೆಯಲ್ಲಿ ಎಲ್ಲಾ ಹಂತದ ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಸೌಕರ್ಯ ಕಲ್ಪಿಸುವ ಉದ್ದೇಶದಿಂದ ಈ ತೀರ್ಮಾನ ಕೈಗೊಂಡಿದ್ದೇವೆ ಎಂದವರು ಹೇಳಿದ್ದಾರೆ.

ಇದೇ ಉದ್ದೇಶಕ್ಕಾಗಿ ಆರೋಗ್ಯ ಸಹಾಯಕರನ್ನು ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಸಂಯೋಜನೆ ಅಡಿ ನೇಮಕ ಮಾಡಲಾಗುವುದು.

ಮೂರು ವರ್ಷಗಳವರೆಗೆ ಗುತ್ತಿಗೆ ಆಧಾರದ ಮೇಲೆ ಸ್ಟಾಫ್ ನರ್ಸ್‌ಗಳಾಗಿ ಇವರು ಕಾರ್ಯನಿರ್ವಹಿಸಲಿದ್ದಾರೆ. ಬಿಎಸ್‌ಸಿ ನರ್ಸಿಂಗ್ ಮಾಡಿದವರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು,

ಇದು ಸೇರಿದಂತೆ ವಿವಿಧ ಆರೋಗ್ಯ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಕರ್ನಾಟಕ ಸ್ಟೇಟ್ ಮೆಂಟಲ್ ಹೆಲ್ತ್ ಕಾಯಿದೆ 2021ಕ್ಕೆ ತಿದ್ದುಪಡಿಗೆ ಸಚಿವ ಸಂಪುಟ ಅನುಮೋದನೆ ನೀಡಲಾಗಿದೆ ಎಂದರು.

ಸರ್ಕಾರಿ ಹಾಗೂ ಅನುದಾನಿತ ಶಾಲಾ-ಕಾಲೇಜುಗಳ ಹದಿಹರೆಯದ ಹೆಣ್ಣುಮಕ್ಕಳಿಗೆ 'ಶುಚಿ' ಕಾರ್ಯಕ್ರಮದಡಿ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳನ್ನು 47 (4ನೇ ಪುಟಕ್ಕೆ)

## ಸತತ ಎರಡನೇ ದಿನ ಡೀಸೆಲ್ ಬೆಲೆ ಇಳಿಕೆ

ನವದೆಹಲಿ, ಆ. 19 - ಗುರುವಾರ ಡೀಸೆಲ್ ಬೆಲೆಯನ್ನು ಲೀಟರ್‌ಗೆ 20 ಪೈಸೆ ಇಳಿಸಲಾಗಿದೆ. ಸತತ ಎರಡನೇ ದಿನ ಡೀಸೆಲ್ ಬೆಲೆ ಇಳಿಕೆಯಾಗಿದೆ. ಆದರೆ, ಪೆಟ್ರೋಲ್ ಬೆಲೆ ಯಥಾಸ್ಥಿತಿಯಲ್ಲಿ ಮುಂದುವರೆದಿದೆ.

ಬುಧವಾರ ಸಹ ಇದೇ ಪ್ರಮಾಣದಲ್ಲಿ ತೈಲ ಬೆಲೆ ಇಳಿಕೆ ಮಾಡಲಾಗಿತ್ತು. ನಿನ್ನೆ ಸಹ ಪೆಟ್ರೋಲ್ ಬೆಲೆಯಲ್ಲಿ ಬದಲಾವಣೆ ಮಾಡಿರಲಿಲ್ಲ. ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಮೇ ನಂತರ ಅತಿ ಕಡಿಮೆ ಮಟ್ಟಕ್ಕೆ ಕುಸಿದಿದೆ. ಕಚ್ಚಾ ತೈಲದ ದರ ಈಗ ಬ್ಯಾರಲ್‌ಗೆ 66.10 ಡಾಲರ್ ಆಗಿದೆ.

ಸಂಸತ್ ಅಧಿವೇಶನ ನಡೆಯುವ ವೇಳೆಯಲ್ಲಿ ಪೆಟ್ರೋಲ್ (2ನೇ ಪುಟಕ್ಕೆ)

## 28 ಪಾಸಿಟಿವ್, 1 ಸಾವು

ದಾವಣಗೆರೆ, ಆ.19- ಜಿಲ್ಲೆಯಲ್ಲಿ ಗುರುವಾರ 28 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಒಬ್ಬರು ಮೃತಪಟ್ಟಿದ್ದಾರೆ. 12 ಜನ ಗುಣಮುಖರಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 11, ಹರಿಹರ 2, ಜಗಳೂರು 1, ಹೊನ್ನಾಳಿ 13 ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 209 ಸಕ್ರಿಯ ಪ್ರಕರಣಗಳಿವೆ. ಇಲ್ಲಿಯವರೆಗೆ 595 ಜನರು (4ನೇ ಪುಟಕ್ಕೆ)

## ಗುಣಮಟ್ಟ, ಬಹುಆಯ್ಕೆ ಉದ್ದೇಶಿತ ಎನ್‌ಇಪಿ

### ವಿದ್ಯಾರ್ಥಿಗಳು ನೇರವಾಗಿ ಉದ್ಯೋಗಕ್ಕೆ ತೆರಳುವಂತೆ ಶಿಕ್ಷಣ : ಪ್ರೊ. ಎಸ್.ವಿ. ಹಲಸೆ

ದಾವಣಗೆರೆ, ಆ. 19 - ವಿದ್ಯಾರ್ಥಿಗಳಿಗೆ ಗುಣಮಟ್ಟದ, ಬಹು ಆಯ್ಕೆಯ, ಉದ್ಯೋಗ ಉದ್ದೇಶಿತ ಕೌಶಲ್ಯ ಹಾಗೂ ಅಗತ್ಯಕ್ಕೆ ಅನುಗುಣವಾದ ಪಠ್ಯ ನೀಡುವ ನೂತನ ಶಿಕ್ಷಣ ನೀತಿ (ಎನ್.ಇ.ಪಿ.) ಯನ್ನು ಸರ್ಕಾರದ ಧ್ಯೇಯೋದ್ದೇಶ ಮತ್ತು ಯು.ಜಿ.ಸಿ. ಆದೇಶದ ಅನುಗುಣವಾಗಿ ಚಾಚೂ ತಪ್ಪದೆ ಜಾರಿಗೆ ತರಲಾಗುವುದು ಎಂದು ದಾವಣಗೆರೆ ವಿ.ವಿ. ಕುಲಪತಿ ಪ್ರೊ. ಎಸ್.ವಿ. ಹಲಸೆ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ಶಿಕ್ಷಣ ಪದ್ಧತಿಯನ್ನು ವಿದ್ಯಾರ್ಥಿಗಳ ಅಗತ್ಯ ಮತ್ತು ಪದವಿಯ ಒಂದು ವರ್ಷದ ಕಲಿಕೆಯೂ ಉಪಯುಕ್ತವಾಗುವಂತೆ ನೀತಿ ರೂಪಿಸಲಾಗಿದೆ ಎಂದರು.

**ಒಂದು ವರ್ಷಕ್ಕೂ ಮಾನ್ಯತೆ :** ನೂತನ ಶಿಕ್ಷಣ ಪದ್ಧತಿಯಲ್ಲಿ ಪದವಿ ನಾಲ್ಕು ವರ್ಷದ್ದಾಗಿದೆ. ಮೊದಲ ಎರಡು ಸೆಮಿಸ್ಟರ್‌ಗೆ ಸರ್ಟಿಫಿಕೇಟ್, 4 ಸೆಮಿಸ್ಟರ್‌ಗಳಿಗೆ ಡಿಪ್ಲೋಮಾ, 6 ಸೆಮಿಸ್ಟರ್‌ಗಳಿಗೆ ಪದವಿ ಹಾಗೂ ನಾಲ್ಕು ವರ್ಷಕ್ಕೆ ಹಾನರ್ಸ್ ನೀಡಲಾಗು ವುದು. ನಾಲ್ಕು ವರ್ಷ ಪೂರೈಸಿದ ನಂತರ ಸ್ನಾತಕೋತ್ತರದಲ್ಲಿ ಒಂದು ವರ್ಷ ಅಧ್ಯಯನ ಮಾಡಿದರೆ ಸಾಕು ಎಂದು ಹೇಳಿದರು.

**ಬಿಬಿಎಂ, ಬಿ.ಕಾಂ, ಅರ್ಥಶಾಸ್ತ್ರ, ರಾಜ್ಯ ಶಾಸ್ತ್ರ, ಗಣಿತ ಹಾಗೂ ಕಂಪ್ಯೂಟರ್ ಸೈನ್ಸ್‌ಗಳಿಗೆ ನಾಲ್ಕು ವರ್ಷದ ಪದವಿ ಜಾರಿ**



**ಬೆಣ್ಣೆದೋಸೆಗೆ ಭೌಗೋಳಿಕ ಸೂಚಕ**

ವಿಶ್ವವಿದ್ಯಾನಿಲಯ ಕಳೆದ ಒಂದು ವರ್ಷದಲ್ಲಿ 24 ಪೇಟೆಂಟ್‌ಗೆ ಅರ್ಜಿ ದಾಖಲಿಸಿದ್ದು, ಈಗಾಗಲೇ ಆರು ಪೇಟೆಂಟ್ ಪಡೆದುಕೊಂಡಿದೆ. ಮುಂದಿನ ದಿನಗಳಲ್ಲಿ 100 ಪೇಟೆಂಟ್ ಹಾಗೂ 500 ಕಾಪಿರೈಟ್‌ಗಳನ್ನು ದಾಖಲಿಸುವ ಗುರಿ ಹೊಂದಲಾಗಿದೆ ಎಂದು ದಾವಣಗೆರೆ ವಿ.ವಿ. ಕುಲಸಚಿವೆ ಡಾ.ಗಾಯತ್ರಿ ದೇವರಾಜ್ ತಿಳಿಸಿದ್ದಾರೆ. ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಭೌಗೋಳಿಕ ಸೂಚಕಗಳನ್ನು ಗುರುತಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಬೆಣ್ಣೆದೋಸೆ, ಮಂಡಕ್ಕಿ ಮಾಡುವ ವಿಧಾನ, ಭತ್ತದ ತಳಿಗಳಿಗೆ ಭೌಗೋಳಿಕ ಸೂಚಕಗಳನ್ನು ಪಡೆಯಲಾಗುತ್ತಿದೆ ಎಂದವರು ಹೇಳಿದರು.

ಹಳೆಯ ಸವಕಲಾಗಿದ್ದ ಪಠ್ಯವನ್ನು ಕೈಬಿಟ್ಟು ಹೊಸ ಪಠ್ಯ ರೂಪಿಸಲಾಗುತ್ತಿದೆ. ವಿದ್ಯಾರ್ಥಿಗಳು ಹೆಚ್ಚುವರಿ ಕೋರ್ಸ್‌ಗೆ ಹೋಗದೆ, ಅಪ್ರೆಂಟಿಸ್ ಮಾಡದೆ ನೇರವಾಗಿ ಕೆಲಸಕ್ಕೆ ತೆರಳಲು (3ನೇ ಪುಟಕ್ಕೆ)

## ನಕಲಿ ದಾಖಲೆ ಸೃಷ್ಟಿಸಿ ಬೆಸ್ಕಾಂನಲ್ಲಿ ಉದ್ಯೋಗ

ದಾವಣಗೆರೆ, ಆ.19- ಇಲ್ಲಿನ ಬೆಸ್ಕಾಂ ವಿಭಾಗದಲ್ಲಿ ಉದ್ಯೋಗ ಪಡೆಯುವ ಉದ್ದೇಶದಿಂದ ಇಬ್ಬರು ಅಭ್ಯರ್ಥಿಗಳು ನಕಲಿ ಅಂಕಪಟ್ಟಿ ಸೃಷ್ಟಿಸಿ ವಾಮ ಮಾರ್ಗದಲ್ಲಿ ಉದ್ಯೋಗವನ್ನು ಗಿಟ್ಟಿಸಿಕೊಂಡು ಮೋಸ ಮಾಡಿರುವುದಾಗಿ ಇಲ್ಲಿನ ಬಡಾವಣೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

**ಇಬ್ಬರ ವಿರುದ್ಧ ದೂರು**

ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ಕುಂಟೋಜಿ ಗ್ರಾಮದ ಲಾಳೇಮಶಾಕ್ ನಾಯ್ಕೊಡಿ, ಬಸವನಬಾಗೇವಾಡಿ ತಾಲ್ಲೂಕಿನ ವಡವಡಗಿ ಗ್ರಾಮದ ಹುಸೇನ್ ಸಾ ಸರಸುಣಗಿ ಎಂಬುವರ ವಿರುದ್ಧ ವಂಚನೆ ದೂರು ದಾಖಲಾಗಿದೆ.

ಕಳೆದ ಫೆ.10,2015ರಂದು ಬೆಸ್ಕಾಂ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಮಾರ್ಗದಾಳು ಹುದ್ದೆಗೆ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿತ್ತು. ನೇಮಕಾತಿ ನಿಯಮಗಳ ಅನ್ವಯ (4ನೇ ಪುಟಕ್ಕೆ)

## ರಸ್ತೆಯಲ್ಲಿ ನಾಟಿ ಮಾಡಿ ಪ್ರತಿಭಟನೆ



**ಎಸ್.ಎಸ್. ಬಡಾವಣೆ**

ದಾವಣಗೆರೆ, ಆ. 19- ಗುಂಡಿಗಳೇ ತುಂಬಿದ್ದ ರಸ್ತೆಯಲ್ಲಿ ಭತ್ತದ ಸಸಿ ನಾಟಿ ಮಾಡುವ ಮೂಲಕ ಇಲ್ಲಿನ ಎಸ್.ಎಸ್. ಬಡಾವಣೆ ನಾಗರಿಕರು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಎಸ್.ಎಸ್. ಬಡಾವಣೆ ಎ ಬ್ಲಾಕ್ 1ನೇ ಮುಖ್ಯ ರಸ್ತೆಯಿಂದ 13ನೇ ಮುಖ್ಯ ರಸ್ತೆವರೆಗಿನ ರಸ್ತೆ ಸಂಪೂರ್ಣ ಹಾಳಾಗಿದ್ದು, ಶಾಮನೂರು ರಸ್ತೆಯಿಂದ ಬಾಪೂಜಿ ಎಂಬಿಎ ಫಾರ್ಮಸಿ, ಅಥಣಿ ಕಾಲೇಜಿಗೆ ಹಾದು ಹೋಗಲು ಇದು ಮುಖ್ಯರಸ್ತೆಯಾಗಿದೆ.

ಈ ರಸ್ತೆಯಲ್ಲಿ ನಿತ್ಯವೂ ಸಾವಿರಾರು ವಿದ್ಯಾರ್ಥಿಗಳು ಕಾಲೇಜಿಗೆ ಹೋಗಿ ಬರಲು ಹರಸಾಹಸ ಪಡುತ್ತಿದ್ದಾರೆ. ಮಕ್ಕಳು ಹಾಗೂ ವಯೋವೃದ್ಧರೂ ಸಹ ಅನೇಕ ಬಾರಿ ರಸ್ತೆಯಲ್ಲಿ ಬಿದ್ದು ಕೈ-ಕಾಲು ಗಾಯ ಮಾಡಿಕೊಂಡ ನಿದರ್ಶನಗಳಿವೆ. ಕಳೆದ 3-4 ವರ್ಷಗಳಿಂದಲೂ ಇದೇ ಪರಿಸ್ಥಿತಿ ಇದ್ದು, ಕೂಡಲೇ ಸಂಬಂಧಿಸಿದ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

ಪ್ರತಿಭಟನೆಯಲ್ಲಿ ಮುದೇಗೌಡ್ರ ರಾಜಶೇಖರಪ್ಪ, ಹೇಮಗಿರಿಯಪ್ಪ, ಎಸ್.ವೀರಭದ್ರಪ್ಪ, ಶಿವಕುಮಾರ್, ವೈ.ರೇವಣ್ಣ, ಡಾ.ಅಪೂರ್ ಧನಂಜಯ, ವೇಣು ಗೋಪಾಲ್, ದಿಲೀಪ್, ಅಂಗಡಿ ಮಂಜು, ಅಜ್ಜಪ್ಪ, ಜಗದೀಶ್, ಮಾರುತಿ, ಅಲ್ಲಮ ಪ್ರಭು, ಸಚಿನ್, ರಾಜಣ್ಣ, ವೆಂಕಟೇಶ್, ಪ್ರವೀಣ್ ಇತರರು ಇದ್ದರು.

## ಕೊರೊನಾ ಎಂಬುದು ವೈದ್ಯಕೀಯ ವಲಯದಲ್ಲಿ ಜೂಜಾಟ

**ಹರಪನಹಳ್ಳಿ ಕಾರ್ಯಕ್ರಮದಲ್ಲಿ ಉಜ್ಜಯಿನಿ ಪೀಠದ ಜಗದ್ಗುರುಗಳ ವ್ಯಾಕುಲತೆ**



ಹರಪನಹಳ್ಳಿ, ಆ.19- ದೇಶದಲ್ಲಿ ಕೊರೊನಾ 3ನೇ ಅಲೆ ಹರಡುತ್ತಿದೆ. ಜನರು ಜಾಗೃತಿ ವಹಿಸುವುದರ ಜೊತೆಗೆ ಧರ್ಮ ಜಾಗೃತಿ ಕಾರ್ಯಕ್ರಮಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದರ ಮೂಲಕ ಕೊರೊನಾವನ್ನು ಹಿಮ್ಮೆಟ್ಟಿಸಬಹುದು ಎಂದು ಉಜ್ಜಿನಿ ಪೀಠದ ಶ್ರೀ 1008 ಜಗದ್ಗುರು ಸಿದ್ಧಲಿಂಗ ರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಅಡವಿಹಳ್ಳಿ ಗ್ರಾಮದ ಸದ್ಗುರು ಶಿವಯೋಗಿ ಚಿರಾಭಿಮಾನಿ ದಾಸೋಹ ಬೃಹನ್ಮಠ ಸ್ವಾಮಿ ಹಾಗೂ ಆಂಜನೇಯ ಸ್ವಾಮಿಯ ದೇವಸ್ಥಾನದ ಉದ್ಘಾಟನೆ ನೆರವೇರಿಸಿ, ಭಕ್ತ ಸಮೂಹಕ್ಕೆ ಜಗದ್ಗುರುಗಳು ಆಶೀರ್ವಚನ ನೀಡಿದರು.

ಕೊರೊನಾ ಸಂದರ್ಭದಲ್ಲಿ ಯಾವುದೇ ಮಠಾಧೀಶರು ಸಂಚಾರ ಮಾಡುವುದು ವಿರಳ. ಆದರೆ ಭಕ್ತರ ಮನವಿಗೆ, ಧರ್ಮ ಜಾಗೃತಿಯನ್ನು ಮೂಡಿಸುವ ಸಲುವಾಗಿಯೇ ಇಂತಹ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವುದು ಅನಿವಾರ್ಯವಾಗಿದ್ದು, ಭಕ್ತರು ಪೂಜೆ ಕಾರ್ಯಕ್ರಮಗಳನ್ನು ಸರಳವಾಗಿ ತಮ್ಮ ತಮ್ಮ ಮನೆಯಲ್ಲಿಯೇ ಆಚರಿಸುವುದು ಸೂಕ್ತ. ಕೊರೊನಾ ಎಂಬುದು ವೈದ್ಯಕೀಯ ವಲಯದಲ್ಲಿ ಜೂಜಾಟವಾಗಿದೆ. (4ನೇ ಪುಟಕ್ಕೆ)

## ಹತ್ತನೇ ತರಗತಿ ಇಂಗ್ಲಿಷ್ ಪರೀಕ್ಷೆಗೆ ಹಾಜರಾದ ಹರಿಯಾಣ ಮಾಜಿ ಸಿಎಂ

ಸಿರ್ಸ, ಆ. 19 – ಹರಿಯಾಣದ ಮಾಜಿ ಮುಖ್ಯಮಂತ್ರಿ ಹಾಗೂ ಐ.ಎನ್.ಎಲ್.ಡಿ. ಅಧ್ಯಕ್ಷ ಓಂ ಪ್ರಕಾಶ್ ಚೌತಾಲಾ ಅವರು ತಮ್ಮ 86ನೇ ವಯಸ್ಸಿನಲ್ಲಿ ಹತ್ತನೇ ತರಗತಿಯ ಇಂಗ್ಲಿಷ್ ವಿಷಯದ ಪರೀಕ್ಷೆ ಬರೆದಿದ್ದಾರೆ.

ಪರೀಕ್ಷೆಗೆ ಸಂಪೂರ್ಣ ಸಿದ್ಧತೆ ನಡೆಸಿದ್ದಾಗಿ ಹೇಳಿರುವ ಚೌತಾಲಾ, ಶೇ.100ರಷ್ಟು ಅಂಕ ಪಡೆಯುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎರಡು ವರ್ಷಗಳ ಹಿಂದೆ ನಾನು ತಿಹಾರ್ ಜೈಲಿನಲ್ಲಿದ್ದಾಗ ಹತ್ತನೇ ತರಗತಿ ಪರೀಕ್ಷೆ ಬರೆದಿದ್ದೆ. ಆದರೆ, ಇಂಗ್ಲಿಷ್ ವಿಷಯದ ಪರೀಕ್ಷೆಗೆ ಹಾಜರಾಗಿರಲಿಲ್ಲ. ಹೀಗಾಗಿ ಈಗ ಪರೀಕ್ಷೆ ಬರೆದಿದ್ದೇನೆ (4ನೇ ಪುಟಕ್ಕೆ)

## ಜಾತಿ ಸಮೀಕ್ಷೆ ; ಚರ್ಚಿಸಿ ತೀರ್ಮಾನ

ಬೆಂಗಳೂರು, ಆ. 19 - ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತ ಕಾಲದಲ್ಲಿ ನಡೆಸಿದ ಆರ್ಥಿಕ, ಸಾಮಾಜಿಕ ಸಮೀಕ್ಷೆ ವರದಿಯ ಅನುಷ್ಠಾನ ಕುರಿತು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಮಾಜ ಕಲ್ಯಾಣ ಖಾತೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಆರ್ಥಿಕ, ಸಾಮಾಜಿಕ ಸಮೀಕ್ಷೆ ನಡೆಸಿದ ಕಾಂತರಾಜ್ ಅವರು ಸಲ್ಲಿಸಿದ ವರದಿಯನ್ನು ಹಿಂದುಳಿದ ವರ್ಗಗಳ ಆಯೋಗ ಪರಿಶೀಲಿಸುತ್ತಿದೆ ಎಂದರು. (3ನೇ ಪುಟಕ್ಕೆ)

DAVANAGERE URBAN CO-OPERATIVE BANK LTD.

ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217. ಪಿ.ಬಿ.ರಸ್ತೆ, ದಾವಣಗೆರೆ - 577002.

ನಮ್ಮೆಲ್ಲಾ ಸದಸ್ಯರಿಗೂ, ಗ್ರಾಹಕರಿಗೂ, ಠೇವಣಿದಾರರಿಗೂ, ಹಿತೈಷಿಗಳೂ ವರಮಹಾಲಕ್ಷ್ಮಿ ಹಬ್ಬದ ಹಾರ್ದಿಕ ಶುಭಾಶಯಗಳು

ಬ್ಯಾಂಕಿನಿಂದ ಸಾಲ ಪಡೆದ ಸದಸ್ಯರ ಗಮನಕ್ಕೆ

ಬ್ಯಾಂಕಿನ ಮಾನ್ಯ ಸದಸ್ಯರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕೊರೊನಾ ವೈರಸ್‌ನಿಂದ ಗ್ರಾಹಕರ ವ್ಯವಹಾರದಲ್ಲಿ ತೊಂದರೆಯಾಗಿರುವುದಕ್ಕೆ ಬ್ಯಾಂಕಿನ ಕಾರ್ಯನಿರ್ವಾಹಕ ಮಂಡಲಿಯವರು ಸಾಲ ಪಡೆದ ಗ್ರಾಹಕರಿಗೆ ಸ್ಪಂದಿಸುವ ಉದ್ದೇಶದಿಂದ ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್ 2021ರ ತಿಂಗಳ ತನಕ ಅಸಲು ಮತ್ತು ಬಡ್ಡಿಯನ್ನು ನಂತರದ ತಿಂಗಳಿನ 10ನೇ ತಾರೀಖಿನೊಳಗೆ ಕಟ್ಟಿದವರಿಗೆ ಕೋವಿಡ್-19 ಎಂಬ ವಿವರಣೆಯೊಂದಿಗೆ 1% ಬಡ್ಡಿಯಲ್ಲಿ ರಿಯಾಯಿತಿಯನ್ನು ಬಡ್ಡಿ ಖಾತೆಗೆ ಜಮಾ ಮಾಡಲಾಗುವುದು. ಸಾಲ ಪಡೆದ ಮಾನ್ಯ ಗ್ರಾಹಕರು ಇದರ ಸದುಪಯೋಗವನ್ನು ಪಡೆಯಲು ಈ ಮೂಲಕ ಕೋರಿದೆ.

ವಿಶೇಷ ಸೂಚನೆ : ಈ ಸೌಲಭ್ಯವು ಮೂರು ತಿಂಗಳವರೆಗೆ ಮಾತ್ರ

ಕೋಗುಂಡಿ ಬಕ್ಕೇಶಪ್ಪ, ಅಧ್ಯಕ್ಷರು
ಅಂದನೂರು ಮುಪ್ಪಣ್ಣ, ಉಪಾಧ್ಯಕ್ಷರು
ಡಿ.ವಿ. ಆರಾಧ್ಯಮಠ, ಪ್ರಧಾನ ವ್ಯವಸ್ಥಾಪಕರು

ಶ್ರೀ ಭದ್ರಶೆಟ್ಟಿ ಗುರುಬಸವರಾಜ ನಿಧನ



ನಂ. 695/171, 4ನೇ ಮೇನ್,
4ನೇ ಕ್ರಾಸ್, ಆಂಜನೇಯ ಬಡಾವಣೆ,
ಸವಿಡೈನ್ ಹೋಟೆಲ್ ಹತ್ತಿರ,
ದಾವಣಗೆರೆ ವಾಸಿಯಾದ

ಭದ್ರಶೆಟ್ಟಿ ಗುರುಬಸವರಾಜ (ಕೊಟ್ಟೂರು)

ಇವರು ದಿ.: 19.08.2021ರ ಗುರುವಾರ ಬೆಳಿಗ್ಗೆ 9.37 ನಿಧನರಾಗಿರುತ್ತಾರೆ. ಇಬ್ಬರು ಗಂಡು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಗಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿ.: 20.08.2021ರ ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ಶಾಮನೂರು ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಅಂತಿಮ ದರ್ಶನ : ಮೃತರ ಸ್ವಗೃಹದಲ್ಲಿ ಬೆಳಿಗ್ಗೆ 8.00 ರಿಂದ 9.00 ಗಂಟೆಯವರೆಗೆ

ಇಂತಿ ದುಃಖತಪ್ತರು : ಶ್ರೀಮತಿ ರೇಖಾ ಮತ್ತು ಭದ್ರಶೆಟ್ಟಿ ಆನಂದ ಮತ್ತು ಮಕ್ಕಳು, ಶ್ರೀಮತಿ ಡಾ. ಪ್ರತಿಮಾ ಮತ್ತು ಡಾ. ದಿನೇಶ್ ಮತ್ತು ಮಕ್ಕಳು, ಭದ್ರಶೆಟ್ಟಿ ವಂಶಸ್ಥರು ಹಾಗೂ ಬಂಧು-ಮಿತ್ರರು.
94482 72238, 98450 67217

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



॥ ಶ್ರೀ ಕೋಗುಂಡೆ ಬಸವೇಶ್ವರ ಪ್ರಸನ್ನ ॥
ದಾವಣಗೆರೆ ನಗರದ ಶಾಮನೂರು ವಾಸಿ
ಶ್ರೀಮತಿ ಶ್ರೀ ನಿಟುವಳ್ಳಿ ಚಂದ್ರಣ್ಣ (ಚನ್ನಪ್ಪ) ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 13.08.2021ನೇ ಶುಕ್ರವಾರ ಬೆಳಿಗ್ಗೆ 9 ಕ್ಕೆ
ನಮ್ಮ ಪೂಜ್ಯ ಅಣ್ಣನವರಾದ ದಿ॥ ಶ್ರೀ ಚನ್ನಬಸಪ್ಪ ಎನ್. ಇವರ ಧರ್ಮಪತ್ನಿ
ನಿಟುವಳ್ಳಿ ಶ್ರೀಮತಿ ನಂಜಮ್ಮನವರು
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 21.08.2021ನೇ ಶನಿವಾರ ಬೆಳಿಗ್ಗೆ 10.45ಕ್ಕೆ
ಶ್ರೀ ಆಂಜನೇಯ ಸ್ವಾಮಿ ಸಮುದಾಯ ಭವನ, ಶಾಮನೂರು
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು
✦ ಶ್ರೀಮತಿ ಶ್ರೀ ನಿಟುವಳ್ಳಿ ಚಂದ್ರಣ್ಣ (ಚನ್ನಪ್ಪ) ಮತ್ತು ಮಕ್ಕಳು
✦ ಶ್ರೀಮತಿ ಗಿರಿಜಮ್ಮ ಶ್ರೀ ಎನ್.ರೇವಣ್ಣಸಿದ್ದಪ್ಪ ಮತ್ತು ಮಕ್ಕಳು
✦ ಶ್ರೀಮತಿ ಗೌರಮ್ಮ ಶ್ರೀ ಎನ್.ಸಿ. ನಾಗರಾಜ್ ಮತ್ತು ಮಕ್ಕಳು
✦ ದಿ॥ ದ್ರಾಕ್ಷಾಯಣಮ್ಮ ದಿ॥ ಭಿಷಜ್ಞೇಶ್ವರಪ್ಪನವರ ಮಕ್ಕಳು, ಕಕ್ಕರಗೊಳ್ಳ
✦ ಶ್ರೀಮತಿ ಪ್ರೇಮ, ಶ್ರೀ ಜಯಪ್ಪ ಮತ್ತು ಮಕ್ಕಳು, ಬಿ.ಕಲಪನಹಳ್ಳಿ
✦ ಶ್ರೀಮತಿ ಸಾವಿತ್ರಮ್ಮ ಶ್ರೀ ಗೌಡ್ರ ಶಿವಮೂರ್ತೆಪ್ಪ ಮತ್ತು ಮಕ್ಕಳು, ಮುಚ್ಚನೂರು
✦ ಶ್ರೀಮತಿ ಸಾಕಮ್ಮ ಶ್ರೀ ಕೆ.ಎಂ. ಮಹೇಶ್ವರಪ್ಪ ಮತ್ತು ಮಕ್ಕಳು, ದೇವರಬೆಳಕೆರೆ
✦ ಶ್ರೀಮತಿ ಗುರುಸಿದ್ದಮ್ಮ (ರೇಖಾ) ದಿ॥ ವೀರಣ್ಣ ಮತ್ತು ಮಕ್ಕಳು, ದಾವಣಗೆರೆ
✦ ನಿಟುವಳ್ಳಿ ವಂಶಸ್ಥರು, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು ಮತ್ತು ಶಾಮನೂರು ಗ್ರಾಮಸ್ಥರು
ಮೊಬೈಲ್ : 98445 99897, 94834 62927

# ಸದಾಶಿವ ಆಯೋಗದ ವರದಿ ಜಾರಿಗೆ ತರಲು ಪ್ರಾಮಾಣಿಕ ಪ್ರಯತ್ನ : ಎ. ನಾರಾಯಣಸ್ವಾಮಿ

ಹರಿಹರ, ಆ.19- ದಲಿತ ಸಮುದಾಯದ ಜನರ ಒಳಿತಿಗಾಗಿ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ಜಾರಿಗೆ ತರಲು ಸರ್ಕಾರಕ್ಕೆ ಒತ್ತಡ ಹಾಕುವುದಾಗಿ ಕೇಂದ್ರ ಸಚಿವ ಎ. ನಾರಾಯಣ ಸ್ವಾಮಿ ಹೇಳಿದರು.

ನಗರದ ಹೊರವಲಯದ ಬೈಪಾಸ್ ಬಳಿ ಇರುವ ಪ್ರೊಫೆಸರ್ ಬಿ. ಕೃಷ್ಣಪ್ಪ ನವರ ಸಮಾಧಿಗೆ ಪುಷ್ಪಾರ್ಚನೆ ಮಾಡಿ, ನಂತರ ಅವರು ಮಾತನಾಡಿದರು.



ದಲಿತ ಸಮುದಾಯದಲ್ಲಿ ಬಹಳ ಜನರು ಬಡವರು ಇದ್ದು, ಅವರು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹೆಚ್ಚು ಹಿಂದುಳಿದಿರುವುದರಿಂದ ದಲಿತ ಸಮುದಾಯದ ಜನರು ಆರ್ಥಿಕವಾಗಿ ಸಬಲರಾಗಲು ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಜಾರಿಗೆ ತರಬೇಕಾಗಿದೆ. ಅದಕ್ಕೆ ನಾನು ಸಮುದಾಯದ ಪರವಾಗಿ ಸರ್ಕಾರದ ಮೇಲೆ ಒತ್ತಡ ಹಾಕಿ, ಸಮಾಜದ ಜನರಿಗೆ ನ್ಯಾಯ ಕೊಡಿಸುವ ಕೆಲಸವನ್ನು ಮಾಡುವುದಾಗಿ ಹೇಳಿದರು.

**ಹರಿಹರ**

ಸಮಾಜದ ಮುಖಂಡ ಹೆಚ್. ನಿಜಗುಣ ಮಾತನಾಡಿ, ದಲಿತ ಸಮಾಜವು ಆರ್ಥಿಕವಾಗಿ ಹಿಂದುಳಿದಿದೆ. ಅವರನ್ನು ಮೇಲೆ ತರುವುದಕ್ಕೆ ಸಮಾಜದ ಸಚಿವ ಎ. ನಾರಾಯಣಸ್ವಾಮಿ ಅವರು ಸರ್ಕಾರದ ಮೇಲೆ ಪ್ರಭಾವ ಬೀರಿ, ಸದಾಶಿವ ಆಯೋಗದ ವರದಿಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕು. ಹಾಗೂ ಸಮುದಾಯದ ಜನರನ್ನು ಮೇಲೆ ತರುವಂತಹ ಕೆಲಸವನ್ನು ಮಾಡಬೇಕೆಂದು ಮನವಿ ಮಾಡಿದರು.

ಸಚಿವರು ಶ್ರೀಗಳ ಆಶೀರ್ವಾದ ಪಡೆದುಕೊಂಡು ನಂತರ ತೆರಳಿದರು. ಈ ಸಂದರ್ಭದಲ್ಲಿ ದಾವಣಗೆರೆ ಸಂಸದ ಜಿ.ಎಂ. ಸಿದ್ದೇಶ್ವರ್, ಮಾಯಕೊಂಡ ಶಾಸಕ ಪ್ರೊ. ಲಿಂಗಣ್ಣ, ಮಾಜಿ ಎಂಎಲ್‌ಸಿ ಡಾ. ಎ.ಹೆಚ್. ಶಿವಯೋಗಿ ಸ್ವಾಮಿ , ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ನಗರಸಭೆ ಸದಸ್ಯರಾದ ಹನುಮಂತಪ್ಪ, ರಜನಿಕಾಂತ್, ಸುರೇಶ್ ತೆರದಾಳ, ವಿರೂಪಾಕ್ಷ , ಸಮಾಜದ ಮುಖಂಡರಾದ ಬಿ.ಎನ್. ರಮೇಶ್, ಮಲ್ಲೇಶ್, ಹನುಮಂತಪ್ಪ, ಕೇಶವ, ಹೆಚ್. ಸದಾಶಿವ, ಶಿವಪ್ಪ ಇನ್ನಿತರರಿದ್ದರು.

# ನೈಜ ಭಕ್ತರಾಗದಿದ್ದಲ್ಲಿ ದೇವಾಲಯ ಕಟ್ಟುವುದು ನಿರರ್ಥಕ



**ಜಗಳೂರು ತಾಲ್ಲೂಕಿನ ಕಾರ್ಯಕ್ರಮದಲ್ಲಿ ಭೋವಿ ಗುರು ಪೀಠದ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿ**

ಜಗಳೂರು, ಆ.19- ನೂರು ದೇವಾಲಯ ಕಟ್ಟಿ ಪ್ರವೇಶಿಸುವುದಕ್ಕಿಂತ, ದೇವಾಲಯ ಪ್ರವೇಶಿಸುವ ನೂರಾರು ದೇಹಗಳು ದೇವಾಲಯವಾಗಿ ಪರಿವರ್ತನೆಗೊಳ್ಳಬೇಕು. ಭಕ್ತರು ನೈಜ ಭಕ್ತರಾಗದಿದ್ದಲ್ಲಿ ದೇವಾಲಯ ಕಟ್ಟುವುದು ನಿರರ್ಥಕ ಎಂದು ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಬೆಂಚಿಕಟ್ಟೆ ಗ್ರಾಮದಲ್ಲಿ ಆಂಜನೇಯ ಸ್ವಾಮಿ ದೇವಾಲಯ ಲೋಕಾರ್ಪಣೆ ಹಾಗೂ ಕಳಸಾರೋಹಣ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ದೇವಾಲಯ ಪ್ರವೇಶಿಸುವ ದೇಹಗಳು ದುರ್ಗುಣ, ದುಶ್ಚಟ, ದುರ್ಬುದ್ಧಿ ತ್ಯಜಿಸಿ ಸದ್ಗುಣ, ಸದ್ಬುದ್ಧಿ, ಸದಾಚಾರ ಮೈಗೂಡಿಸಿಕೊಳ್ಳಲಿ. ತನು, ಮನ, ಭಾವ ಶುದ್ಧೀಕರಣ, ಅಂತರಂಗ - ಬಹಿರಂಗ ಶುದ್ಧೀಕರಣದೊಂದಿಗೆ ಮಾನವ ಮಹಾದೇವನಾಗಬೇಕೆಂದು ಹೇಳಿದರು.

ಜ್ಯೋತಿ ಮುಟ್ಟಿದ ಬತ್ತಿಯೆಲ್ಲ ಜ್ಯೋತಿಯಂತಪ್ಪುವಯ್ಯ ಎಂಬಂತೆ ಆಂಜನೇಯ ಭಕ್ತನು ಭಗವಂತನ ಸ್ಥಾನವನ್ನು ಪಡೆಯಬಹುದು ಎಂಬುದಕ್ಕೆ ಸೂಕ್ತ ನಿದರ್ಶನ ಎಂದರು. ಚಿತ್ರದುರ್ಗ ಭೋವಿ ಗುರುಪೀಠದ ವಿದ್ಯಾಸಂಸ್ಥೆಯ ನಿರ್ದೇಶಕ ಡಿ.ಸಿ. ಮೋಹನ್, ಸೂರಗೊಂಡನಹಳ್ಳಿ ಕೃಷ್ಣಮೂರ್ತಿ, ಹಾವೇರಿ ಜಿಲ್ಲಾ ಭೋವಿ ಸಂಘದ ಅಧ್ಯಕ್ಷ ರವಿ ಪೂಜಾರಿ, ಡಾ. ನಾಗೇಶ್, ತಾಲ್ಲೂಕು ಅಧ್ಯಕ್ಷರಾದ ಪಿ. ದೇವರಾಜ್ ಮಾತನಾಡಿದರು.

ದಾನಿಗಳಾದ ಕುರುಬರಹಟ್ಟಿ ತಿಪ್ಪೇಶ, ಬಿ.ಜಿ. ರಾಜಪ್ಪ, ಉಪನ್ಯಾಸಕ ದ್ಯಾಮಪ್ಪ, ಉಪನ್ಯಾಸಕ ಕೆ.ಎಚ್. ವೆಂಕಟೇಶ್, ಗ್ರಾ.ಪಂ. ಮಾಜಿ ಸದಸ್ಯ ದ್ಯಾಮಪ್ಪ, ವಿರೂಪಾಕ್ಷಪ್ಪ ಆರ್, ಪಿ. ಬಸವರಾಜ್ ಅವರುಗಳನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಎಲ್. ಜಗನ್ನಾಥ, ಪಿ.ಟಿ. ಗೋವಿಂದಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಅಂಜಿನಪ್ಪ, ಪಿ.ಎಲ್.ಡಿ. ಬ್ಯಾಂಕ್ ಮಾಜಿ ಅಧ್ಯಕ್ಷ ಪರಮೇಶ್ವರಪ್ಪ, ಸತ್ಯಮ್ಮ ತಿಮ್ಮಪ್ಪ, ಭಜನೆ ಹಿರಿಯರಾದ ಕುಮಾರಸ್ವಾಮಿ, ನವಲಪ್ಪ, ಬಿ.ಎಸ್. ರಾಜಪ್ಪ, ವಿರೂಪಾಕ್ಷಪ್ಪ, ನಾಗೇಶಪ್ಪ, ಹೆಬ್ಬಾಳ ನಾಗರಾಜಪ್ಪ, ಪೂಜಾರಿ ದ್ಯಾಮೇಶ್, ರಂಗಪ್ರವೇಶ ಯಲ್ಲಪ್ಪ, ಟಿ. ವೀರಭದ್ರಪ್ಪ, ಬಿ.ಇ.ಅಂಜಿನಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಎಕ್ಕೆಗೊಂದಿ - ಭಾನುವಳ್ಳಿ ರಸ್ತೆಯಲ್ಲಿ ನಾಟಿ ಮಾಡಿ ಪ್ರತಿಭಟಿಸಿದ ರೈತರು



ಮಲೇಬೆನ್ನೂರು, ಆ.19- ಎಕ್ಕೆಗೊಂದಿ ಕ್ರಾಸ್‌ನಿಂದ ಭಾನುವಳ್ಳಿ ವರೆಗಿನ ರಸ್ತೆ ನಿರ್ಮಾಣಕ್ಕೆ ಆಗ್ರಹಿಸಿ ರೈತ ಸಂಘದ ಕಾರ್ಯಕರ್ತರು ರಸ್ತೆಯಲ್ಲಿ ನಾಟಿ ಮಾಡಿ ಪ್ರತಿಭಟನೆ ಮಾಡಿದ ಘಟನೆ ಇಂದು ನಡೆದಿದೆ.

ಭಾನುವಳ್ಳಿ ರೈತ ಸಂಘದ ಕಾರ್ಯಕರ್ತರು ಕೆಸರುಮಯವಾದ ರಸ್ತೆಯಲ್ಲಿ ಭತ್ತದ ಸಸಿಗಳನ್ನು ನಾಟಿ ಮಾಡಿ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತ ಪಡಿಸಿದರು.

ಈ ವೇಳೆ ಮಾತನಾಡಿದ ರೈತ ಸಂಘದ ಭಾನುವಳ್ಳಿ ಗ್ರಾಮ ಘಟಕದ ಅಧ್ಯಕ್ಷ ಎನ್. ಪ್ರಕಾಶ್, ಇದುವರೆಗೆ ಜಿಲ್ಲಾ ಪ್ರಮುಖ ರಸ್ತೆಯಾಗಿದ್ದ ಎಕ್ಕೆಗೊಂದಿ ಕ್ರಾಸ್-ನಂದಿಗುಡಿ ರಸ್ತೆ ಇದೀಗ ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿದೆ. ಶ್ರೀ ಕ್ಷೇತ್ರ ಉಕ್ಕಡಗಾತ್ರಿ ಮತ್ತು ನಂದಿಗುಡಿ ಮಠಕ್ಕೆ ರಾಜ್ಯದ ನಾನಾ ಭಾಗಗಳಿಂದ ನಿತ್ಯ ಸಾವಿರಾರು ಜನ ಬಂದು ಹೋಗುವ ಈ ರಸ್ತೆ ಕಳೆದ 10 ವರ್ಷಗಳಿಂದ ಅಭಿವೃದ್ಧಿ ಕಾಣದೆ ನೆನೆಗುದಿಗೆ ಬಿದ್ದಿದೆ. ಕೇವಲ 3 ಕಿ.ಮೀ. ರಸ್ತೆಯನ್ನು ಅಭಿವೃದ್ಧಿ ಪಡಿಸದ ಸರ್ಕಾರಕ್ಕೆ ನಮ್ಮ ಧಿಕ್ಕಾರವಿರಲಿ ಎಂದರು.

ನಾವು ಈ ರೀತಿ ಪ್ರತಿಭಟನೆ ಮಾಡಿದಾಗ ಗುಂಡಿಗಳಿಗೆ ಮಣ್ಣು ಹಾಕುತ್ತಾರೆ. ಕೆಲವು ದಿನಗಳ ನಂತರ ಮತ್ತೆ ಗುಂಡಿ ಬೀಳುತ್ತದೆ. ಬೇಸಿಗೆ ಸಮಯದಲ್ಲಿ ಈ ರಸ್ತೆಯಲ್ಲಿ ಧೂಳು ಬಂದರೆ, ಮಳೆಗಾಲದಲ್ಲಿ ಕೆಸರಿನ ಗದ್ದೆಯಂತಾಗುತ್ತದೆ.

ಹಾವೇರಿ ಜಿಲ್ಲೆಯ ಸಂಪರ್ಕವನ್ನು ಹೊಂದಿರುವ ಈ ರಸ್ತೆಯನ್ನು ಅಭಿವೃದ್ಧಿ ಪಡಿಸಿ ಎಂದರೆ ಕಾಂಗ್ರೆಸ್‌ನವರು ಬಿಜೆಪಿಯವರ ಮೇಲೆ ಹೇಳುತ್ತಾರೆ. ಬಿಜೆಪಿಯವರು ಶಾಸಕರ ಮೇಲೆ ಹೇಳುತ್ತಾ ಕಾಲ ಕಳೆಯುತ್ತಿದ್ದಾರೆ ಎಂದು ರೈತ ಸಂಘದ ಕಾರ್ಯಕರ್ತರು ಬೇಸರ ವ್ಯಕ್ತಪಡಿಸಿದರು. ಮಾರುತಿ, ಜಬೀವುಲ್ಲಾ, ಹಲ್ಮನಿ ಸಿದ್ದಪ್ಪ, ನಾಗರಾಜ್ ಇನ್ನಿತರರು ಪ್ರತಿಭಟನೆಯಲ್ಲಿದ್ದರು.

## ರಾಜೀವ್ ಹುಟ್ಟುಹಬ್ಬ : ನಗರದಲ್ಲಿ ಇಂದು ರಕ್ತದಾನ ಶಿಬಿರ

ಜಿಲ್ಲಾ ಕಾಂಗ್ರೆಸ್ ಸಮಿತಿ ಸಹಯೋಗದೊಂದಿಗೆ ಜಿಲ್ಲಾ ಎನ್.ಎಸ್.ಯು.ಐ ಘಟಕದ ವತಿಯಿಂದ ಮಾಜಿ ಪ್ರಧಾನಿ ರಾಜೀವ್‌ಗಾಂಧಿ ಹುಟ್ಟುಹಬ್ಬದ ಪ್ರಯುಕ್ತ ರಕ್ತದಾನ ಶಿಬಿರ ಇಂದು ನಡೆಯಲಿದೆ. ಬೆಳಿಗ್ಗೆ 10-30 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಛೇರಿಯ ಎಸ್.ಎಸ್.ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಈ ಶಿಬಿರ ನಡೆಯಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಜಿಲ್ಲಾ ಎನ್.ಎಸ್.ಯು.ಐ ಮಾಜಿ ಪ್ರಧಾನ ಕಾರ್ಯದರ್ಶಿ ಶಶಿಧರ್ ಪಾಟೀಲ್ ತಿಳಿಸಿದ್ದಾರೆ.

## ಮೆಕ್ಕೆಜೋಳ ರೈತರಿಗೆ 2500 ರೂ. ಪ್ರೋತ್ಸಾಹ ಧನ ಘೋಷಿಸಲು ಮನವಿ

ದಾವಣಗೆರೆ, ಆ.19- ಮೆಕ್ಕೆಜೋಳ ಬೆಳೆದಿರುವ ರೈತರಿಗೆ 2,500 ರೂಪಾಯಿಗಳನ್ನು ಪ್ರೋತ್ಸಾಹ ಧನವೆಂದು ಘೋಷಿಸಲು ಕೇಂದ್ರದ ಕೃಷಿ ಸಚಿವರು ಹಾಗೂ ಪ್ರಧಾನಿಗಳಲ್ಲಿ ಪ್ರಸ್ತಾಪಿಸುವಂತೆ ಕೃಷಿ ಇಲಾಖೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಕರ್ನಾಟಕ ಪ್ರದೇಶ ರೈತ ಸಂಘ ಮನವಿ ಮಾಡಿದೆ.

ಕಳೆದ ಸಾಲಿನಲ್ಲಿ ಮೆಕ್ಕೆಜೋಳವನ್ನು ರೈತರು ಬೆಳೆದು ಪ್ರತಿ ಕ್ವಿಂಟಾಲ್‌ಗೆ ಕೇವಲ 1300 ರೂ.ಗೆ ಮಾರಾಟ ಮಾಡಿ, ಅಪಾರ ನಷ್ಟಕ್ಕೆ ಗುರಿಯಾಗಿದ್ದಾರೆ. ಕೊನೆಗೆ ಮೆಕ್ಕೆಜೋಳ ಊಟದ ಧಾನ್ಯವಲ್ಲ ಎಂಬ ಹಣೆಪಟ್ಟಿ ಹಚ್ಚಿ, ಬೆಂಬಲ ಬೆಲೆ ಘೋಷಣೆಯಾಗಲೇ ಇಲ್ಲ. ಈಗ ನೋಡಿದರೆ ದೊಡ್ಡ ದೊಡ್ಡ ವರ್ತಕರಿಗೆ ಲಾಭ ಬರುವಂತೆ ಪ್ರತಿ ಒಂದು ಕ್ವಿಂಟಾಲ್‌ಗೆ 2300 ರೂ. ಮತ್ತು ಹೆಚ್ಚಿನ ಬೆಲೆ ಆಗಿದ್ದು ರೈತರೆಲ್ಲರೂ ಹತಾಶೆಗೊಳಗಾಗಿದ್ದಾರೆ.

ಕರಂದ್ಲಾಜೆ ಅವರು ಕೇಂದ್ರದ ಮಂತ್ರಿಗಳಿಗೆ ಒತ್ತಾಯ ಹೇರಿ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಿಸಬೇಕಾಗಿ ಕರ್ನಾಟಕದ ರೈತರ ಪರವಾಗಿ ಪ್ರಾರ್ಥಿಸುವುದಾಗಿ ಸಂಘದ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಪ್ರಾರ್ಥಿಸಿದ್ದಾರೆ.

## ಖಾದ್ರಿ ಅಕಾಡೆಮಿಗೆ ಅಮಾನುಲ್ಲಾ ಅಧ್ಯಕ್ಷ






ದಾವಣಗೆರೆ, ಆ.19- ನಗರದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಮೌಲಾನಾ ಮೊಹಮ್ಮದ್ ಹನೀಫ್ ರಜಾ ಖಾದ್ರಿ ಅಕಾಡೆಮಿಯ ಅಧ್ಯಕ್ಷರಾಗಿ ಜೆ. ಅಮಾನುಲ್ಲಾ ಖಾನ್, ಕಾರ್ಯಾಧ್ಯಕ್ಷರಾಗಿ ಕೆ. ಜಮೀಲ್ ಹುಸೇನ್, ಪ್ರಧಾನ ಕಾರ್ಯದರ್ಶಿಯಾಗಿ ಖಾದರ್ ಬಾಷಾ, ಕೋಶಾಧಿಕಾರಿಯಾಗಿ ಎಸ್.ಎಂ. ರಶೀದ್ ಹುಸೇನ್ ಆಯ್ಕೆಯಾಗಿದ್ದಾರೆ.

## ಜಿಲ್ಲಾಡಳಿತದಿಂದ ಇಂದು ಅರಸು ಜನ್ಮ ದಿನ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ರವರ 106ನೇ ಜನ್ಮ ದಿನಾಚರಣೆ ಕಾರ್ಯಕ್ರಮವು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.

## ಕೃಷಿಕ ಸಮಾಜದ ಅಧ್ಯಕ್ಷರಾಗಿ ಬಿದರಗಡ್ಡೆ ಜಯಪ್ಪ



**ಹೊನ್ನಾಳಿ**

ಹೊನ್ನಾಳಿ, ಆ.19- ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷರಾಗಿ ಬಿದರಗಡ್ಡೆ ಬಿ.ಹೆಚ್. ಜಯಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೃಷಿಕ ಸಮಾಜದ ಅಧ್ಯಕ್ಷರಾಗಿದ್ದ ಕುಂದೂರು ಹನುಮಂತಪ್ಪನವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಕೃಷಿ ಕಚೇರಿಯಲ್ಲಿ ಚುನಾವಣೆ ನಡೆಸಲಾಯಿತು.

ಚುನಾವಣಾಧಿಕಾರಿಗಳು ಹಾಗು ಸಹಾಯಕ ಕೃಷಿ ನಿರ್ದೇಶಕರಾದ ಸುರೇಶರ ಜಯಪ್ಪ ಆಯ್ಕೆಗೊಂಡಿರುವುದಾಗಿ ಘೋಷಿಸಿದರು. ನಂತರ ನಡೆದ ಸಭೆಯಲ್ಲಿ ಕೃಷಿಕ ಸಮಾಜದ ನೂತನ ಜಿಲ್ಲಾ ಪ್ರತಿನಿಧಿಯಾಗಿ ಚಿಕ್ಕಹಾಲಿವಾಣದ ಎಲ್. ರುದ್ರನಾಯ್ಕ್ ಹೆಸರನ್ನು ಸಭೆಯಲ್ಲಿ ಚರ್ಚಿಸಿ ಆಯ್ಕೆ ಮಾಡಿ ಕಳಿಸಲು ತೀರ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ನೂತನ ಅಧ್ಯಕ್ಷ ಜಯಪ್ಪನವರನ್ನು ಜಿಲ್ಲಾ ಪಂಚಾಯ್ತಿ ಸದಸ್ಯ ಎಂ. ಮಹೇಶ್ ಸನ್ಮಾನಿಸಿ ಗೌರವಿಸಿದರು.

ಕೃಷಿಕ ಸಮಾಜದ ಉಪಾಧ್ಯಕ್ಷೆ ಆರುಂಡಿ ಜಯಮ್ಮ, ನಿರ್ದೇಶಕರಾಗಿ ಬೀರಗೊಂಡನಹಳ್ಳಿ ಶಿವನಗೌಡ, ಕ್ಯಾಸಿನಕೊಪ್ಪ ಕುಮಾರ್, ಕೆಂಚಿಕೊಪ್ಪ ರಾಮಲಿಂಗಪ್ಪ, ಬೆಳಗುತ್ತಿ ಉಮೇಶ್, ಆರುಂಡಿ ಸೋಮಶೇಖರಪ್ಪ, ಚಿಕ್ಕಹಾಲಿವಾಣದ ಎಲ್. ರುದ್ರನಾಯ್ಕ್, ಉಜ್ಜನಿಪುರ ಬಸವರಾಜಪ್ಪ, ನರಸಗೊಂಡನಹಳ್ಳಿ ಕೃಷ್ಣ ಮೂರ್ತಿ, ಮುಖಂಡರಾದ ದಿಡಗೂರು ಪಾಲಾಕ್ಷಪ್ಪ, ಆನಂದ ಇನ್ನಿತರರಿದ್ದರು.


## ರಾಜ್ಯ ಹೈಕೋರ್ಟ್‌ಗೆ ಆರು ಪೂರ್ಣಾವಧಿ ನ್ಯಾಯಮೂರ್ತಿಗಳು

ನವದೆಹಲಿ, ಆ. 19 - ಕರ್ನಾಟಕ ಹೈಕೋರ್ಟ್‌ನ ಆರು ಹೆಚ್ಚುವರಿ ನ್ಯಾಯಮೂರ್ತಿಗಳನ್ನು ಪೂರ್ಣಾವಧಿ ನ್ಯಾಯಮೂರ್ತಿಗಳಾಗಿ ನೇಮಿಸಲು ಸುಪ್ರೀಂ ಕೋರ್ಟ್ ಕೊಲೀಜಿಯಂ ಒಪ್ಪಿಗೆ ನೀಡಿದೆ.

ಆಗಸ್ಟ್ 17ರಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದಲ್ಲಿ ನಡೆದ ಕೊಲೀಜಿಯಂ ಸಭೆಯಲ್ಲಿ ಈ ನಿರ್ದಾರ ತೆಗೆದುಕೊಳ್ಳಲಾಗಿದೆ.

ನ್ಯಾಯಮೂರ್ತಿಗಳಾದ ನೀರನಹಳ್ಳಿ ಶ್ರೀನಿವಾಸನ್ ಸಂಜಯ ಗೌಡ, ಜ್ಯೋತಿ ಮೂಲಿಮನಿ, ನಟರಾಜ ರಂಗಸ್ವಾಮಿ, ಹೇಮಂತ್ ಚಂದನಗೌಡರ್, ಪ್ರದೀಪ್ ಸಿಂಗ್ ಯರೂರ್ ಹಾಗೂ ಮಹೇಶನ್ ನಾಗಪ್ರಸನ್ನ ಅವರನ್ನು ಪೂರ್ಣಕಾಲಿಕ ನ್ಯಾಯಮೂರ್ತಿಗಳಾಗಿ ನೇಮಿಸಲು ನಿರ್ಧರಿಸಲಾಗಿದೆ.


## 3ನೇ ವರ್ಷದ ಪುಣ್ಯ ಸ್ಮರಣೆ



ದಾವಣಗೆರೆ ವಿನೋಬನಗರ 1ನೇ ಮೇನ್, 1ನೇ ಕ್ರಾಸ್ ವಾಸಿ
**ಶ್ರೀ ಸಣ್ಣಪ್ಪನವರ ಗುರುಪಾದಪ್ಪ**
ಹಿಂದಿ ಪಂಡಿತ್
ನಿಧನ : 20.8.2018
ನೀವು ನಮ್ಮನ್ನಗಲಿ ಇಂದಿಗೆ 3 ವರ್ಷಗಳಾದವು.
ಸದಾ ನಿಮ್ಮ ನೆನಪು ಮತ್ತು ಮಾರ್ಗದರ್ಶನದಲ್ಲಿರುವ...
ಪತ್ನಿ : ಶ್ರೀಮತಿ ಶಾರದಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಮತ್ತು ಸಣ್ಣಪ್ಪನವರ ವಂಶಸ್ಥರು ಹಾಗೂ ಬಂಧು-ಮಿತ್ರರು.

## ಚಿರಸ್ಮರಣೆ



ದಿ।। ಶ್ರೀ ಪಾಡೇಗಲ್ ದತ್ತಾತ್ರೇಯ (ದತ್ತು)
ನೀವು ನಮ್ಮನ್ನಗಲಿ ಹತ್ತು ವರ್ಷಗಳಾದವು .
ಸದಾ ನಿಮ್ಮ ಸ್ಮರಣೆ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,
**ಪಾಡೇಗಲ್ ವಿವೇಕಾನಂದ ಕುಟುಂಬದವರು ಮತ್ತು ತಂಗಿಯರು.**

## ಪ್ರಥಮ ವರ್ಷದ ಪುಣ್ಯಸ್ಮರಣೆ

**ದಿ।। ಶ್ರೀ ಜಿ.ಡಿ. ದೇವರಾಜ**
ಮಾಲೀಕರು, ರುಚಿ ಪೇಂಟ್ಸ್ ಮತ್ತು ಗಣೇಶ ಶಾಮಿಯಾನ ಸಪ್ಲೈಯರ್ಸ್
ನಿಧನ : 20.08.2020



ಆತ್ಮೀಯ ಸ್ನೇಹಿತನಾದ
ನೀನು ನಮ್ಮನ್ನಗಲಿ
ಇಂದಿಗೆ ಒಂದು ವರ್ಷವಾಯಿತು.
ಸದಾ ನಿನ್ನ ಸ್ಮರಣೆಯಲ್ಲಿರುವ...

✦ ಶಿವಕುಮಾರ್ ಬಿ.ಹೆಚ್. ✦ ಜೆ. ಈಶ್ವರ್‌ಸಿಂಗ್ ಕವಿತಾಳ ✦ ಸೋಮಶೇಖರ್ ಬಾಬು ಆರ್.
✦ ಮುರಳೀಧರ್ ಗುಪ್ತ ✦ ರಮೇಶ್ ಕೆ. ಹೆಚ್. ✦ ಮಂಜುನಾಥ್ ಡಿ.
✦ ರಾಜರಾವ್ ಜಿ. ಎಸ್. ವಕೀಲರು ✦ ದಿಗ್ವಿಜಯ್ ಹತ್ತಿ ✦ ನಿರಂಜನ್ ಮೂರ್ತಿ ಬಿ. ಎಂ.
✦ ವಿಜಯಕುಮಾರ್ ಬಾಳೆಹೊಲ ✦ ಎಂ. ಎನ್. ಪ್ರಕಾಶ್ (ಬಾಬು) ✦ ಅರುಣ್‌ಕುಮಾರ್ ಟಿ. ಜಿ.
✦ ಮಹಾಲಿಂಗೇಶ್ ಎಸ್. ಎಂ. ✦ ಥಾಮಸ್ ಸಿ. ✦ ಬಸವರಾಜ್ ನೀಲಿ ✦ ಪ್ರಕಾಶ್ ಅಧಿಕಾರಿ
✦ ಮಲ್ಲಿಕಾರ್ಜುನ ಕಂಬಳಿ ✦ ರವಿಕುಮಾರ್ ಪಲ್ಲಾಗಟ್ಟಿ ✦ ಚಂದ್ರಶೇಖರ್ ಐನಹಳ್ಳಿ
✦ ನಾಗರಾಜ್ ಬಿ. ಆರ್. ✦ ಕರಬಸಪ್ಪ ಒಣರೊಟ್ಟಿ ✦ ಸಂಗಮೇಶ್ ಹಿರೇಗೌಡರ್
✦ ಪಿ. ಸಿ. ರಾಮನಾಥ್ ✦ ಮಂಜುನಾಥ್ ಗಡಿಗುಡಾಳ್ ✦ ಆರ್. ಎಚ್. ನಾಗಭೂಷಣ್
✦ ಡಾ. ರಮೇಶ್ ✦ ಡಾ. ಬಿ.ಹೆಚ್. ಮಂಜುನಾಥ್ ✦ ಡಾ. ದೇವೇಂದ್ರಪ್ಪ ಕೆ.ಸಿ.
✦ ಡಾ. ಪ್ರವೀಣ್ ಅಂಬರ್‌ಕರ್ ✦ ಡಾ. ರುದ್ರೇಶ್ ✦ ಆರ್. ಜಿ. ಬದರಿನಾಥ್ ✦ ಶಶಾಂಕ್ ಜಿ.ಎಂ.
✦ ತಿಪ್ಪಣ್ಣ ✦ ಹೊನ್ನೂರು ಪ್ರಕಾಶ್ ✦ ರಾಜು ರೆಡ್ಡಿ ✦ ಬಸವರಾಜ್ ಆಲೂರು
✦ ಅರುಣ್ ಬಿ. ವಿನಾಯಕ ಸ್ಟುಡಿಯೋ ✦ ರಾಜು ಜಿ ವಿ ✦ ರಾಮನಾಥ್ ಖಮಿತ್ಕರ್
✦ ಸುರೇಶ್ ಶಾಸ್ತ್ರಿ ✦ ಮರುಳಸಿದ್ದಪ್ಪ ✦ ಕೆ.ಜಿ. ಶಾಂತರಾಜ್ ಕಕ್ಕರಗೊಳ್ಳ ಗೌಡ್ರು
✦ ಕಾರ್ತಿಕ್ ಆರ್. ವಿ. ✦ ಶ್ರೀನಿವಾಸ್, (ಕೋಕಿ ಮ್ಯಾಕ್) ✦ ಎನ್. ಕೆ. ಉಮಾಪತಿ (ಗಂಗನಕಟ್ಟೆ)
✦ ಬೆಳ್ಳೂಡಿ ಶಿವಕುಮಾರ್ ✦ ಶ್ರೀಕಾಂತ್ (ಎಲ್.ಎಫ್.ಎಂ.)

**ಕುಂದುವಾಡ ಕೆರೆ ವಾಯು ವಿಹಾರ ಬಳಗ ಮತ್ತು ಟೀ ಲಾಂಚ್ ಗೆಳೆಯರ ಬಳಗ**

## ಪ್ರಥಮ ಪುಣ್ಯಸ್ಮರಣೆ





| | |
|---|---|
| **ದಿ।। ಶ್ರೀಮತಿ ಈರಮ್ಮ ಆನೆಕೊಂಡ** | **ದಿ।। ಶ್ರೀ ಜಿ.ಡಿ. ದೇವರಾಜ** |
| (ದಿ।। ಆನೆಕೊಂಡ ಗೌಡ್ರು ದಾನಪ್ಪನವರ ಧರ್ಮಪತ್ನಿ) | ಮಾಲೀಕರು, ರುಚಿ ಪೇಂಟ್ಸ್ ಮತ್ತು ಗಣೇಶ ಶಾಮಿಯಾನ ಸಪ್ಲೈಯರ್ಸ್ |
| ನಿಧನ : 10.08.2020 | ನಿಧನ : 20.08.2020 |

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನೀವು ತೋರಿದ ಮಾರ್ಗದರ್ಶನ
ನಮಗೆ ಸದಾ ದಾರಿದೀಪ, ನಿಮ್ಮ ನೆನಪಿನಲ್ಲಿರುವ....


ಪತ್ನಿ : **ಶ್ರೀಮತಿ ಸೌಮ್ಯ ದೇವರಾಜ್**
ಪುತ್ರರು : **ಜಿ.ಡಿ. ಧನುಷ್‌ಗೌಡ**
**ಜಿ.ಡಿ. ರುಚಿತ್‌ಗೌಡ**
**ಹಾಗೂ ಕುಟುಂಬ ವರ್ಗ**


## ಪ್ಯಾಲಕುರ್ತಿ ಲಕ್ಷ್ಮಮ್ಮ ನಿಧನ



ದಾವಣಗೆರೆ ನಿಟುವಳ್ಳಿ ವಾಸಿ ಸವಿತಾ ಸಮಾಜದ ದಿ. ಪಾಲ್ಯಕುರ್ತಿ ಬಾಲಾಜಿ ರಾವ್ ಅವರ ಧರ್ಮಪತ್ನಿ, ವೆಂಕಟಾಚಲಪತಿಯವರ ತಾಯಿ ಶ್ರೀಮತಿ ಪಾಲ್ಯಕುರ್ತಿ ಲಕ್ಷ್ಮಮ್ಮ (88) ಅವರು ದಿನಾಂಕ 19.08.2021ರ ಗುರುವಾರ ಬೆಳಗ್ಗೆ ನಿಧನರಾದರು. 10 ಜನ ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20.08.2021ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಗರದ ಬೂದಾಳ್ ರಸ್ತೆಯಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

## ಹಳೇ ಕುಂದುವಾಡದ ಮಿಟ್ಲಕಟ್ಟೆ ಚನ್ನಬಸಪ್ಪ ನಿಧನ



ದಾವಣಗೆರೆ ಸಿಟಿ ಸಮೀಪದ ಹಳೇಕುಂದುವಾಡದ ಬೆಂಚಿಕಟ್ಟೆ ನಿವಾಸಿ ಮಿಟ್ಲಕಟ್ಟೆ ಚನ್ನಬಸಪ್ಪ (60) ಅವರು ದಿನಾಂಕ 19.08.2021ರ ಗುರುವಾರ ರಾತ್ರಿ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20.08.2021ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಹಳೇಕುಂದುವಾಡದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಲೆಕ್ಕದ ಸುಶೀಲಮ್ಮ ನಿಧನ



ದಾವಣಗೆರೆ ನಿಜಲಿಂಗಪ್ಪ ಲೇಔಟ್ 2ನೇ ಮೇನ್, 9ನೇ ಕ್ರಾಸ್ ವಾಸಿ ದಿ. ಲೆಕ್ಕದ ಶಿವಮೂರ್ತಿ ಇವರ ಧರ್ಮಪತ್ನಿ **ಶ್ರೀಮತಿ ಲೆಕ್ಕದ ಸುಶೀಲಮ್ಮ** (81) ಅವರು, ದಿನಾಂಕ 19.08.2021ರಂದು ಗುರುವಾರ ಸಂಜೆ 7 ಗಂಟೆಗೆ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20.8.2021ರಂದು ಶುಕ್ರವಾರ ಮಧ್ಯಾಹ್ನ 12.30ಕ್ಕೆ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತರು**
**99021 20555, 99011 80250**

## ಅಪರಿಚಿತ ಮಹಿಳೆ ಶವ ಪತ್ತೆ



ದಾವಣಗೆರೆ, ಆ.19- ನಗರದ ಶಾಮನೂರು ಸರ್ವೀಸ್ ರಸ್ತೆಯಲ್ಲಿ ಸುಮಾರು 55-60 ವರ್ಷದ ಮೃತ ಮಹಿಳೆಯ ಶವ ನಿನ್ನೆ ಸಂಜೆ ಪತ್ತೆಯಾಗಿದೆ.

ಈಕೆ ಹಸಿರು, ಕೆಂಪು ಬಣ್ಣದ ಹೂವುಗಳಿರುವ ನೈಟಿ, ನಶೆ ಕಲರ್ ಜೀನ್ಸ್ ಪ್ಯಾಂಟ್ ಧರಿಸಿದ್ದು, ಇವಳು ಕೋಲು ಮುಖ ಹೊಂದಿರುತ್ತಾರೆ. ಎಡಭಾಗದ ಹಣೆಯ ಮೇಲೆ ಗಾಯವಿರುತ್ತದೆ.

ಸಂಬಂಧಪಟ್ಟವರು ವಿದ್ಯಾನಗರ ಪೊಲೀಸ್ ಠಾಣೆ (ಫೋನ್ : 08192-262688, ಮೊ : 94808 03251) ಅಥವಾ ಕೆಟಿಜೆ ನಗರ ವೃತ್ತ ಠಾಣೆ (ಫೋನ್ : 08192-259293) ಯನ್ನು ಸಂಪರ್ಕಿಸಬಹುದು.

## ಸತತ ಎರಡನೇ ದಿನ ಡೀಸೆಲ್ ಬೆಲೆ ಇಳಿಕೆ

(1ನೇ ಪುಟದಿಂದ) ಹಾಗೂ ಡೀಸೆಲ್ ಬೆಲೆಯನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳಲಾಗಿತ್ತು. ನಂತರದಲ್ಲಿ ಡೀಸೆಲ್ ಬೆಲೆ ಇಳಿಕೆ ಮಾಡಲಾಗಿದೆ.

# ಬಾಲ್ಯ ವಿವಾಹ ತಡೆಗೆ ಕಠಿಣ ಕ್ರಮ ಜರುಗಿಸಲು ಡಿಸಿ ಸೂಚನೆ



ದಾವಣಗೆರೆ, ಆ. 19- ಬಾಲ್ಯ ವಿವಾಹ ಪ್ರಕರಣಗಳಲ್ಲಿ ಅಧಿಕಾರಿಗಳು ಯಾವುದೇ ಕರುಣೆ, ದಾಕ್ಷಿಣ್ಯ ಅಥವಾ ಪ್ರಭಾವಕ್ಕೆ ಒಳಗಾಗದೆ ಕಠಿಣ ಕ್ರಮ ಜರುಗಿಸಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ವಿವಿಧ ಸಮಿತಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಈ ವರ್ಷ ಏಪ್ರಿಲ್‌ನಿಂದ ಈವರೆಗೆ ಒಟ್ಟು 41 ಬಾಲ್ಯ ವಿವಾಹ ಪ್ರಕರಣಗಳು ವರದಿಯಾಗಿದ್ದು, ಇದರಲ್ಲಿ 38 ವಿವಾಹಗಳನ್ನು ತಡೆಯಲಾಗಿದೆ, 3 ಮದುವೆ ಗಳು ನಡೆದಿವೆ. ಈ ಪೈಕಿ ದಾವಣಗೆರೆ ತಾಲ್ಲೂಕಿ ನಲ್ಲಿ ಮಾತ್ರ 3 ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಾಗಿವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ವಿಜಯಕುಮಾರ್ ಮಾಹಿತಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕಿನಲ್ಲಿ ಅಧಿಕಾರಿಗಳು ಪಡೆದ ಮಾಹಿತಿ ಹಾಗೂ ಮಕ್ಕಳ ಸಹಾಯವಾಣಿ ಕಾರಣಗಳಿಂದ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ. ಆದರೆ ಉಳಿದ ತಾಲ್ಲೂಕಿನಲ್ಲಿ ಪ್ರಕರಣಗಳು ದಾಖಲಾಗಿಲ್ಲ ಎಂದರೆ, ಅಲ್ಲಿ ಬಾಲ್ಯ ವಿವಾಹ ನಡೆದಿಲ್ಲ ಎಂದರ್ಥವಲ್ಲ. ಉಳಿದ ತಾಲ್ಲೂಕುಗಳಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿಲ್ಲ, ಹೀಗಾಗಿ ಪ್ರಕರಣಗಳು ಕಂಡುಬಂದಿಲ್ಲ ಎಂದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಮೀನಾಕ್ಷಿ ಮಾತನಾಡಿ, ಜಿಲ್ಲೆಯಲ್ಲಿ ಈ ವರ್ಷ ಏಪ್ರಿಲ್‌ನಿಂದ ಈವರೆಗೆ 18 ವರ್ಷದೊಳಗಿನ ಒಟ್ಟು 141 ಗರ್ಭಿಣಿಯರ ಮಾಹಿತಿ ಆರ್‌ಸಿಹೆಚ್ ಪೋರ್ಟಲ್‌ನಲ್ಲಿ ದಾಖಲಾಗಿದೆ. ಈ ಪೈಕಿ 138 ಮೊದಲ ಬಾರಿ ಹಾಗೂ ಮೂವರು ಎರಡನೇ ಬಾರಿ ಗರ್ಭಿಣಿಯರಾಗಿ ರುವುದು ದಾಖಲಾಗಿದೆ. ಚನ್ನಗಿರಿ ತಾಲ್ಲೂಕು ಒಂದರಲ್ಲೇ 58 ಅಪ್ರಾಪ್ತ ಗರ್ಭಿಣಿಯರು ದಾಖಲಾಗಿದ್ದಾರೆ. ಉಳಿದಂತೆ ದಾವಣಗೆರೆ-28, ಹರಿಹರ-14, ಹೊನ್ನಾಳಿ-16, ಜಗಳೂರು-25 ಅಪ್ರಾಪ್ತರು ಗರ್ಭಿಣಿಯರಾಗಿರುವುದು ದಾಖಲಾಗಿದೆ ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ವಿಜಯಕುಮಾರ್ ಪ್ರತಿ ಕ್ರಿಯಿಸಿ, 18 ವರ್ಷದೊಳಗಿನ ಗರ್ಭಿಣಿಯರಿಗೆ ಇಲಾಖೆಯಿಂದ ಮಾತೃವಂದನಾ ಯೋಜನೆಯ ಸೌಲಭ್ಯ ದೊರಕುವುದಿಲ್ಲ. ಇಂತಹ ಪ್ರಕರಣಗಳೆಲ್ಲವೂ ಬಾಲ್ಯ ವಿವಾಹ ಪ್ರಕರಣಗಳಿಗೇ ಸಂಬಂಧಪಡುತ್ತವೆ, ಆಯಾ ಸಿಡಿಪಿಒ ಹಾಗೂ ಡಿಸಿಪಿಯು ಗಳೇ ಈ ಪ್ರಕರಣಗಳಲ್ಲಿ ಕೇಸ್ ದಾಖಲು ಮಾಡಲು ಸಕ್ಷಮ ಪ್ರಾಧಿಕಾರಿಗಳಾಗಿದ್ದಾರೆ ಎಂದರು. (5ನೇ ಪುಟಕ್ಕೆ)

# ಕಾರ್...ಕಾರ್...ಕಾರ್ ಎಲ್ನೋಡಿ ಕಾರ್ !

## ಸಾಮಾನ್ಯರಿಗೆ ತಲೆನೋವಾದ ಪ್ರತಿಷ್ಠಿತ ಬಡಾವಣೆ ಜನರ 'ಕಾರುಬಾರು'

ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ



ದಾವಣಗೆರೆ: ಸ್ಮಾರ್ಟ್ ಸಿಟಿ ಗರಿ ಹೊತ್ತ ದಾವಣಗೆರೆಯಲ್ಲಿ ಈಗ ಕಾರುಗಳೇ ಭಾರವಾಗತೊಡಗಿವೆ.

ಹೌದು, ದಾವಣಗೆರೆಯ ಕೆಲ ಪ್ರತಿಷ್ಠಿತ ಬಡಾವಣೆಗಳ ಕಡೆಗೊಮ್ಮೆ ಕಣ್ಣು ಹಾಯಿಸಿದರೆ ರಸ್ತೆಗಳ ಅಕ್ಕ ಪಕ್ಕ ಕಾರುಗಳ ಸಾಲು ಕಾಣುತ್ತದೆ.

ಒಂದು ಮನೆಯಲ್ಲಿ ಒಂದು ಕಾರು ನಿಲ್ಲಿಸಲು ಮಾತ್ರ ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಂಡಿರುತ್ತಾರೆ ಅಥವಾ ಪಾರ್ಕಿಂಗ್ ಇರುವುದೇ ಅಲ್ಲ...! ಇದು ವಾಸ್ತವ ಸತ್ಯ.

ಇನ್ನೂ ಸೋಜಿಗದ ಸಂಗತಿ ಎಂದರೆ, ವಿದ್ಯಾವಂತ, ಶ್ರೀಮಂತ, ಮಾತೆತ್ತಿದರೆ ಕಾನೂನನ್ನು ನಾಲಿಗೆ ತುದಿಯಲ್ಲೇ ಹಿಡಿದು ಮಾತಾಡುವ ಈ ಜನ ಸೆಟ್ ಬ್ಯಾಕ್ ಬಿಡದೆ, ರಸ್ತೆಗೆ ಹೊಂದಿಕೊಂಡು ಅಥವಾ ಒತ್ತುವರಿ ಮಾಡಿಕೊಂಡು ಮನೆ ಕಟ್ಟಿರುವುದು.

ಕೆಲವರು ಎರಡು ಮೂರು ಅಂತಸ್ತಿನ ಮನೆ ಕಟ್ಟಿ ಬಾಡಿಗೆ ಕೊಟ್ಟಿದ್ದಾರೆ, ದುಬಾರಿ ಬಾಡಿಗೆ ಪಡೆದು ಬರುವ ಬಹುತೇಕರು ಒಂದು ಅಥವಾ ಎರಡು ಕಾರು ಇಟ್ಟುಕೊಂಡವರೇ. ಕೆಲವರು ತಮ್ಮ ದೌಲತ್ತು ತೋರಲು ಉದ್ದನೆಯ ದುಬಾರಿ ಕಾರುಗಳನ್ನು ಇಟ್ಟಿರುವುದು ಉತ್ಪ್ರೇಕ್ಷೆಯ ಮಾತಲ್ಲ.

ಸಿದ್ಧವೀರಪ್ಪ ಬಡಾವಣೆ, ಪಿ.ಜೆ. ಬಡಾವಣೆ, ಸರಸ್ವತಿ ಬಡಾವಣೆ, ತರಳಬಾಳು ಬಡಾವಣೆ, ವಿನಾಯಕ ಬಡಾವಣೆ, ವಿದ್ಯಾನಗರ ಸೇರಿದಂತೆ ಶ್ರೀಮಂತರು, ಸರ್ಕಾರಿ ನೌಕರರು ಹೆಚ್ಚಾಗಿರುವ ಕೆಲವು ಪ್ರತಿಷ್ಠಿತ ಬಡಾವಣೆಗಳ ರಸ್ತೆಗಳತ್ತ ಒಮ್ಮೆ ಕಣ್ಣು ಹಾಯಿಸಿದರೆ ಇಂಥವರ 'ಕಾರು ಬಾರು' ನೋಡಬಹುದು.

ಸಂಚಾರಿ ಒತ್ತಡವಿರುವ ಈ ರಸ್ತೆಗಳಲ್ಲಿ ನಡೆಯುವ ವಿಪರ್ಯಾಸವೆಂದರೆ, ಗಂಡ ದಿಢೀರ್ ಅಂಥ ಕಾರು ನಿಲ್ಲಿಸುತ್ತಾನೆ. ಇನ್ನು ಹೆಂಡತಿ ಇಳಿದು, ತರಕಾರಿ ಮಾರುವವನ ಬಳಿ ಚೌಕಾಸಿಗೆ ಇಳಿದಿರುತ್ತಾಳೆ. ಕಾರಿನ ಹಿಂದೆ ಬಂದ ವಾಹನಗಳು ಹಾರನ್ನೋ ಹಾರನ್...

ಮನೆಯೊಳಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿಕೊಂಡ ಮಾಲೀಕ ಮಹಾಶಯರು ತಮ್ಮ ಸೋಮಾರಿತನ ಪ್ರದರ್ಶಿಸುತ್ತಾ ಹೊರಗಡೆ ರಸ್ತೆಯಲ್ಲಿಯೇ ಕಾರ್ ಪಾರ್ಕಿಂಗ್ ಮಾಡುತ್ತಾರೆ. ಜೊತೆಗೆ ಬಾಡಿಗೆದಾರರ ಕಾರುಗಳೂ ಸಹ ಮನೆಯ ಮುಂದಿನ ರಸ್ತೆಯನ್ನು ಆಕ್ರಮಿಸಿಕೊಂಡಿರುತ್ತವೆ. ಇದರಿಂದಾಗಿ ಇದೀಗ ಪ್ರತಿಷ್ಠಿತ ಬಡಾವಣೆಗಳಲ್ಲಿ ಕಾರ್ ಪಾರ್ಕಿಂಗ್ ಸಮಸ್ಯೆ ಉದ್ಭವಿಸಿದೆ.

ಇಲ್ಲಿನ ರಸ್ತೆಗಳು ದಶಕದ ಹಿಂದಿನವರೆಗೂ ನೆರೆಹೊರೆಯ, ಸ್ಥಳೀಯರ ಓಡಾಟಕ್ಕೆಂದೇ ಮೀಸಲಿದ್ದವು. ಚಿಣ್ಣರು ನಿರ್ಭೀತಿಯಿಂದ ಇವುಗಳಲ್ಲಿ ಆಡುತ್ತಾ ಕಾಲ ಕಳೆಯಬಹುದಿತ್ತು. ಆದರೆ, ಈಗ ವಸತಿ ಪ್ರದೇಶಗಳ ಬಹುತೇಕ ರಸ್ತೆಗಳು, ಹಾಗೂ ಅಕ್ಕ ಪಕ್ಕದ ಖಾಲಿ ನಿವೇಶನಗಳೂ ಸಹ ವಾಹನ ನಿಲುಗಡೆ ಪ್ರದೇಶದಂತೆ ಬಳಸಲಾಗುತ್ತಿದೆ. ಈ ರಸ್ತೆಗಳೀಗ ಅಸುರಕ್ಷಿತವಾಗಿರುವುದಷ್ಟೇ ಅಲ್ಲ, ತುರ್ತು ಸಂದರ್ಭದಲ್ಲಿ ಆಂಬ್ಯುಲೆನ್ಸ್ ಅಥವಾ ಅಗ್ನಿಶಾಮಕ ವಾಹನ ಸಕಾಲದಲ್ಲಿ ಸ್ಥಳಕ್ಕೆ ತಲುಪಲು ಸಾಧ್ಯವಾಗದ ಸ್ಥಿತಿಯಲ್ಲಿವೆ. ರಸ್ತೆಯ ಎರಡೂ ಬದಿಗಳಲ್ಲಿ ಕಾರು ನಿಲ್ಲಿಸುವುದರಿಂದ ರಸ್ತೆ ಮಧ್ಯದ ಏಳೆಂಟು ಅಡಿಯಲ್ಲಿ ಮಾತ್ರ ವಾಹನಗಳು ಸಂಚರಿಸಲು ಜಾಗ ಉಳಿದಿರುತ್ತದೆ. ಎದುರು ಬದಿಯಿಂದ ಯಾವುದಾದರೊಂದು ವಾಹನ ಬಂದರೆ ಮತ್ತೊಂದು ವಾಹನ ಪಕ್ಕಕ್ಕೆ ಸರಿಯಲು ಜಾಗವಿಲ್ಲದ ಸ್ಥಿತಿ ನಿರ್ಮಾಣವಾಗಿರುತ್ತದೆ.

**ಮಧ್ಯಮ ವರ್ಗದ ಬಡಾವಣೆಗಳೂ ಹೊರತಲ್ಲ:** ಕೆಲವು ವರ್ಷಗಳ ಹಿಂದೆ ಶ್ರೀಮಂತರು ಮಾತ್ರ ಕಾರು ಕೊಳ್ಳಲು ಸಾಧ್ಯ ಎಂಬ ಭಾವನೆ ಇತ್ತು. ಆದರೆ ಇಂದು ಮಧ್ಯಮ ವರ್ಗದ ಮನೆಗಳ ಮುಂದೆ ಕಾರುಗಳು ನಿಂತಿರುತ್ತಿವೆ. ಕಾರು ಕೊಂಡು ಓಡಿಸುವಾಸೆ ಯಾರಿಗೆ ತಾನೇ ಇರಲ್ಲ ಹೇಳಿ?

ಪ್ರಸ್ತುತ ದಿನಗಳಲ್ಲಿ ಸೆಕೆಂಡ್ ಹ್ಯಾಂಡ್ ಕಾರ್‌ಗಳ ಬೆಲೆ 50 ಸಾವಿರ ರೂ.ಗಳಿಂದಲೇ ಆರಂಭವಾಗುತ್ತದೆ. ಇನ್ನು ಹೊಸ ಕಾರ್ ಖರೀದಿಸಲು ಬ್ಯಾಂಕುಗಳು ಸುಲಭ ಕಂತುಗಳನ್ನು ನೀಡುತ್ತಿವೆ. ಈ ಹಿನ್ನೆಲೆಯಲ್ಲಿ ಅಗತ್ಯ ಇರಲಿ ಇಲ್ಲದಿರಲಿ, ಇದೀಗ ದಾವಣಗೆರೆಯಲ್ಲಿ ಕಾರು ಕೊಳ್ಳುವವರ ಸಂಖ್ಯೆ ಹೆಚ್ಚಾಗ ತೊಡಗಿದೆ. ಇದರೊಟ್ಟಿಗೆ ಪಾರ್ಕಿಂಗ್ ಸಮಸ್ಯೆಯೂ ತಲೆ ದೋರಲಾರಂಭಿಸಿದೆ.

**ಕಾರುಗಳ ಸಂಖ್ಯೆಯಲ್ಲಿ ಹೆಚ್ಚಳ:** ಕೊರೊನಾ ಹಿನ್ನೆಲೆಯಲ್ಲಿ ಕಳೆದ ಒಂದೂ ವರೆ ವರ್ಷದಿಂದ ನಗರದಲ್ಲಿ ಕಾರುಗಳ ಸಂಖ್ಯೆ ಹೆಚ್ಚಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯ (5ನೇ ಪುಟಕ್ಕೆ)

# ಗುಣಮಟ್ಟ, ಬಹುಆಯ್ಕೆ ಉದ್ದೇಶಿತ ಎನ್‌ಇಪಿ

**(1ನೇ ಪುಟದಿಂದ)** ಸಮರ್ಥರಾಗುವ ರೀತಿಯಲ್ಲಿ ಕೌಶಲ್ಯಾಧರಿತ ಶಿಕ್ಷಣ ನೀಡಲಾಗುವುದು ಎಂದರು.

**ಸೆ.6ರ ಒಳಗೆ ಪಠ್ಯ :** ನೂತನ ಶಿಕ್ಷಣ ಪದ್ಧತಿಯ ಅನ್ವಯ ಮೊದಲ ಎರಡು ಸೆಮಿಸ್ಟರ್‌ಗಳ ಪಠ್ಯವನ್ನು ಸೆಪ್ಟೆಂಬರ್ 6ರ ಒಳಗೆ ರೂಪಿಸಲಾಗುವುದು. ಸ್ಥಳೀಯ ಅಗ ತ್ಯಗಳಿಗೆ ಅನುಗುಣವಾಗಿ ಪಠ್ಯವನ್ನು ಶೇ.30 ರವರೆಗೆ ರೂಪಿಸಿಕೊಳ್ಳಲು ವಿಶ್ವವಿದ್ಯಾನಿಲ ಯಗಳಿಗೆ ಅವಕಾಶ ವಿದೆ ಎಂದವರು ಹೇಳಿದರು.

**ಸೌಲಭ್ಯದಂತೆ ಜಾರಿ :** ಮೂಲಭೂತ ಸೌಲಭ್ಯಕ್ಕೆ ಅನುಗುಣವಾಗಿ ನಾಲ್ಕು ವರ್ಷದ ಪದವಿಯನ್ನು ಜಾರಿಗೆ ತರಲಾಗುತ್ತಿದೆ. ಒಂದೇ ಬಾರಿ ಹೊಸ ವ್ಯವಸ್ಥೆ ಜಾರಿಗೆ ಬರುವುದಿಲ್ಲ. ಸದ್ಯಕ್ಕೆ ಈಗಿರುವಂತೆ ಮೂರು ವರ್ಷದ ಪದವಿಯನ್ನು ಮುಂದುವರೆಸಬಹುದು ಎಂದ ಹಲಸೆ, ವಿಶ್ವವಿದ್ಯಾನಿಲಯದಲ್ಲಿ ಬಿಬಿಎ, ಬಿಕಾಂ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಗಣಿತ ಹಾಗೂ ಕಂಪ್ಯೂಟರ್ ಸೈನ್ಸ್‌ಗಳಿಗೆ ನಾಲ್ಕು ವರ್ಷದ ಪದವಿ ಜಾರಿಗೆ ತರಲಾಗಿದೆ ಎಂದರು.

**ಹೆಚ್ಚು ಆಯ್ಕೆ :** ವಿದ್ಯಾರ್ಥಿಗಳು ವಿಷಯಗಳನ್ನು ಆಯ್ದುಕೊಳ್ಳಲು ನೂತನ ಪದ್ಧತಿಯಲ್ಲಿ ಹೆಚ್ಚು ಆಯ್ಕೆ ನೀಡಲಾಗಿದೆ. ಎರಡು ಮೇಜರ್ ವಿಷಯಗಳ ಜೊತೆಗೆ, ತಾವು ಬಯಸುವ ಒಂದು ಮೈನರ್ ವಿಷಯವನ್ನು ಬೇರೆ ನಿಕಾಯದಿಂದ ಆಯ್ಕೆ ಮಾಡಿಕೊಳ್ಳ ಬಹುದು. ಉದಾಹರಣೆಗೆ ವಿಜ್ಞಾನದ ವಿದ್ಯಾರ್ಥಿ ಇತಿಹಾಸವನ್ನು ಮೈನರ್ ವಿಷಯ ವಾಗಿ ಆಯ್ಕೆ ಮಾಡಿಕೊಳ್ಳಬಹುದು. ಅದೇ ರೀತಿ ಬಿ.ಎ. ವಿದ್ಯಾರ್ಥಿಯೊಬ್ಬ ಗಣಿತ ಇಲ್ಲವೇ ಕಂಪ್ಯೂಟರ್ ಸೈನ್ಸ್ ಅನ್ನು ಮೈನರ್ ವಿಷಯವಾಗಿ ಆಯ್ಕೆ ಮಾಡಿಕೊಳ್ಳಬಹುದು ಎಂದರು.

**ಕನ್ನಡ ಕಡ್ಡಾಯ :** ನೂತನ ಶಿಕ್ಷಣ ಪದ್ಧತಿಯಲ್ಲಿ ಕನ್ನಡದ ಕಲಿಕೆ ಕಡ್ಡಾಯವಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ವಿಶ್ವವಿದ್ಯಾನಿ ಲಯದ ಕುಲಸಚಿವೆ ಡಾ. ಗಾಯತ್ರಿ ದೇವರಾಜ್, ಇದುವರೆಗೂ ಕನ್ನಡ ಎಲ್ಲರಿಗೂ ಕಡ್ಡಾಯ ಇರಲಿಲ್ಲ. ಈಗ ಮೊದಲ ನಾಲ್ಕು ಸೆಮಿಸ್ಟರ್‌ಗಳಿಗೆ ಕಾರ್ಯ ನಿರ್ವಹಿಸಬಹುದಾದ ಕನ್ನಡವನ್ನಾದರೂ ಕಲಿಯುವುದು ಕಡ್ಡಾಯ ಎಂದು ಹೇಳಿದರು.

**ಹೆಚ್ಚು ಜನ ಪದವಿಗೆ :** ಪದವಿಯ ಮೊದಲ ವರ್ಷಕ್ಕೂ ಸರ್ಟಿಫಿಕೇಟ್ ನೀಡುವುದರಿಂದ ವಿದ್ಯಾರ್ಥಿಗಳು ಕಾಲೇಜಿನಿಂದ ಹೊರ ಬೀಳಲಿದ್ದಾರೆ ಎಂಬ ಆತಂಕವನ್ನು ತಳ್ಳಿ ಹಾಕಿದ ಸಿಂಡಿಕೇಟ್ ಸದಸ್ಯೆ ವಿಜಯಲಕ್ಷ್ಮಿ ಹಿರೇಮಠ, ಮೂರು ವರ್ಷ ಪದವಿ ಪೂರ್ಣಗೊಳಿಸದಿದ್ದರೆ ಡ್ರಾಪೌಟ್ ಎಂಬ ಕಾರಣಕ್ಕಾಗಿ ಸಾಕಷ್ಟು ಜನರು ಉನ್ನತ ಶಿಕ್ಷಣಕ್ಕೆ ಬರುತ್ತಿಲ್ಲ. ಈಗ ಎಲ್ಲ ಹಂತದ ಕಲಿಕೆಗೆ ಮಾನ್ಯತೆ ನೀಡುವುದರಿಂದ ಹೆಚ್ಚು ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಬರಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪರೀಕ್ಷಾಂಗ ಕುಲಸಚಿವೆ ಹೆಚ್.ಎಸ್.ಅನಿತ, ಹಣಕಾಸು ಅಧಿಕಾರಿ ಪ್ರಿಯಾಂಕ, ಅಕಾಡೆಮಿಕ್ ಕೌನ್ಸಿಲ್ ಸದಸ್ಯ ಪ್ರೊ. ಮಹಾಬಲೇಶ್ವರ, ಡೀನ್‌ಗಳಾದ ಪ್ರೊ. ರಂಗಪ್ಪ, ಪ್ರೊ. ವೆಂಕಟೇಶ್, ಪ್ರೊ. ಶಿವಕುಮಾರ್ ಕಣಸೋಗಿ ಮತ್ತಿತರರು ಉಪಸ್ಥಿತರಿದ್ದರು.

## ಚರ್ಚಿಸಿ ತೀರ್ಮಾನ

**(1ನೇ ಪುಟದಿಂದ)** ಸಮಾಜ ಕಲ್ಯಾಣ ಇಲಾಖೆಯಲ್ಲಿನ ಆರೋಪಗಳ ಬಗ್ಗೆ ತಮಗೆ ತಿಳಿದಿಲ್ಲ, ಪಾರದರ್ಶಕ ಆಡಳಿತ ಇರಬೇಕೆಂಬುದು ತಮ್ಮ ಆಶಯವಾಗಿದೆ, ಈ ಸಂಬಂಧ ಎಚ್ಚರದಿಂದ ಕಾರ್ಯ ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ದೇವರಾಜ ಅರಸು ಪ್ರಶಸ್ತಿಗೆ 2019ನೇ ಸಾಲಿಗೆ ಬಸಪ್ರಭು ಲಕಮಗೌಡ ಪಾಟೀಲ್, 2020ನೇ ಸಾಲಿಗೆ ಸುಶೀಲಮ್ಮ ಸುಮಂಗಲಿ ಸೇವಾಶ್ರಮ, ಬೆಂಗಳೂರು ಹಾಗೂ 2021ನೇ ಸಾಲಿಗೆ ಭಾಸ್ಕರ್ ರಾವ್ ಹೆಗ್ಗರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಚಿವರು ಇದೇ ಸಂದರ್ಭದಲ್ಲಿ ತಿಳಿಸಿದರು.

# 3.86 ಕೋಟಿ ಜನರು ನಿಯಮಿತ ಸಮಯದಲ್ಲಿ 2ನೇ ಲಸಿಕೆ ಪಡೆದಿಲ್ಲ

ನವದೆಹಲಿ, ಆ. 19 – ದೇಶದ 3.86 ಕೋಟಿಗೂ ಹೆಚ್ಚು ಜನರು ನಿಯಮಿತ ಅವಧಿಯಲ್ಲಿ ಕೊರೊನಾದ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಗಳನ್ನು ಪಡೆದಿಲ್ಲ ಎಂದು ಆರ್.ಟಿ.ಐ. ಅರ್ಜಿಯೊಂದಕ್ಕೆ ಸರ್ಕಾರ ಉತ್ತರಿಸಿದೆ.

ಕೊವಿನ್ ಪೋರ್ಟಲ್ ಪ್ರಕಾರ, ಗುರುವಾರದವರೆಗೆ 44.22 ಕೋಟಿ ಜನರು ಮೊದಲ ಹಾಗೂ 12.59 ಕೋಟಿ ಜನರು ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ.

ಕಾರ್ಯಕರ್ತ ರಮಣ್ ಶರ್ಮ ಎಂಬುವವರು ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿ, ಮೊದಲ ಡೋಸ್ ಪಡೆದ ನಂತರ ಎಷ್ಟು ಜನ ನಿಯಮಿತ ಅವಧಿಯಲ್ಲಿ 2ನೇ ಡೋಸ್ ಪಡೆದಿಲ್ಲ? ಎಂದು ಪ್ರಶ್ನಿಸಿದ್ದರು.

ಇದಕ್ಕೆ ಉತ್ತರ ನೀಡಿರುವ ಕೇಂದ್ರ ಆರೋಗ್ಯ ಸಚಿವಾಲಯದ ಲಸಿಕೆ ವಿಭಾಗ, ನಿಗದಿತ ಅವಧಿಯಲ್ಲಿ ಕೋವಿಶೀಲ್ಡ್ ಲಸಿಕೆ ಪಡೆಯದವರ ಸಂಖ್ಯೆ 3,40,72,993 ಎಂದು ತಿಳಿಸಿದೆ. ನಿಗದಿತ ಅವಧಿಯಲ್ಲಿ ಎರಡನೇ ಕೋವ್ಯಾಕ್ಸಿನ್ ಲಸಿಕೆ ಪಡೆಯದವರ ಸಂಖ್ಯೆ 46,78,406 ಎಂದು ತಿಳಿಸಿದೆ. ಆಗಸ್ಟ್ 17ರವರೆಗೆ ಲಸಿಕೆ ಪಡೆದವರ ಆಧಾರದ ಮೇಲೆ ಈ ಮಾಹಿತಿ ನೀಡಲಾಗಿದೆ.

ಕೋವಿಶೀಲ್ಡ್ ಲಸಿಕೆ ಪಡೆದ 84-112 ದಿನಗಳಲ್ಲಿ ಎರಡನೇ ಡೋಸ್ ಹಾಗೂ ಕೋವ್ಯಾಕ್ಸಿನ್ ಪಡೆದ 28-42 ದಿನಗಳಲ್ಲಿ ಎರಡನೇ ಡೋಸ್ ಪಡೆಯಬೇಕಿದೆ.

ಮೊದಲ ಡೋಸ್ ಪಡೆದವರು ನಿಗದಿತ ಅವಧಿಯಲ್ಲಿ ಎರಡನೇ ಡೋಸ್ ಲಸಿಕೆ ಪಡೆಯಬೇಕೆಂದು ಸಲಹೆ ನೀಡಲಾಗಿದೆ. ಮೊದಲ ಡೋಸ್ ಪಡೆದ ನಂತರ ನಿಗದಿತ ಅವಧಿಯಲ್ಲಿ ಎರಡನೇ ಡೋಸ್ ಲಸಿಕೆ ಪಡೆಯದವರ ಬಗ್ಗೆ ಯಾವುದೇ ಸಲಹೆ ಇಲ್ಲ ಎಂದು ತಿಳಿಸಲಾಗಿದೆ.

# ಮೌಲ್ಯರಹಿತರು ಸಂಸತ್ತು ಪ್ರವೇಶಿಸಬಾರದು

## ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ನಾರಾಯಣ ಸ್ವಾಮಿ ಅಸಮಾಧಾನ



ರಾಣೇಬೆನ್ನೂರು, ಆ.19- ಲೋಕಸಭೆ, ವಿಧಾನಸಭೆಗಳು ಸಂವಿಧಾನದ ಗುಡಿಗಳು. ಸಭಾಧ್ಯ ಕ್ಷರ ಎದುರಿನ ಟೇಬಲ್ ಮೇಲೆ ಹತ್ತಿ ನಿಲ್ಲುವುದು, ಪುಸ್ತಕಗಳನ್ನು ಎಸೆಯುವುದು ಅಸಂಬದ್ಧ ವರ್ತನೆಯಾಗಿದೆ. ಅಧ್ಯಕ್ಷರು ಬಂದಾಗ ಸಭಾ ನಾಯಕರು, ವಿರೋಧಿ ನಾಯಕರು ಎದ್ದು ನಿಂತು ಗೌರವಿಸುವುದು ನಮ್ಮ ಸಂಪ್ರದಾಯ. ಅದನ್ನು ಮುರಿಯುವ ಮೌಲ್ಯರಹಿತರು ಇಲ್ಲಿಗೆ ಬರಲೇಬಾರದು ಎಂದು ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ಕೋಪೋದ್ರಿಕ್ತರಾಗಿ ಅಸಮಾಧಾನ ವ್ಯಕ್ತಪಡಿಸಿದರು.

ಇಂದಿಲ್ಲಿ ನಡೆದ ಜನಾಶೀರ್ವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸುಮಾರು 8 ವಿಧಾನಸಭಾ ಕ್ಷೇತ್ರಗಳಿಗೆ ಒಬ್ಬರಂತೆ ಸಂಸದರು ಆಯ್ಕೆಯಾಗಿರುತ್ತಾರೆ. ಅವರುಗಳು ಸಂಪ್ರದಾಯ ಮರೆಯದೆ ಜವಾಬ್ದಾರಿ ಅರಿತು ಕಾರ್ಯನಿರ್ವಹಿಸಬೇಕು. ಕೆಲ ಘಟನೆಗಳಿಂದ ನಮ್ಮ ಪಕ್ಷದವರ ಮೇಲೆಯೇ ನನಗೆ ಬೇಸರ ಉಂಟಾಗಿತ್ತು. ಅವರನ್ನು ಸಸ್ಪೆಂಡ್ ಮಾಡಬೇಕಿತ್ತು ಎಂದು ಸಚಿವ ನಾರಾಯಣಸ್ವಾಮಿ ಹರಿಹಾಯ್ದರು.

ಪ್ರಧಾನಿ ಮೋದಿಯವರು ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಹಾಗೂ ಮಹಿಳೆಯರು ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿದ್ದಾರೆ. ಅನೇಕ ಕಾರ್ಯಕ್ರಮಗಳ ಮೂಲಕ ಭ್ರಷ್ಟಾಚಾರ ಕಡಿಮೆ ಮಾಡಿದ್ದಾರೆ. ಗಂಭೀರ ಸಮಸ್ಯೆಗಳನ್ನು ಸರಳವಾಗಿಸಿದ್ದಾರೆ. ಇವೆಲ್ಲವುಗಳನ್ನು ಜನರಿಗೆ ತಿಳಿಸುವ ಕಾರ್ಯಕ್ರಮ ಇದಾಗಿದೆ ಎಂದು ಸಚಿವ ನಾರಾಯಣಸ್ವಾಮಿ ಸರ್ಕಾರದ ಯೋಜನೆಗಳ ಬಗ್ಗೆ ವಿವರಿಸಿದರು. ಆಡಳಿತ (5ನೇ ಪುಟಕ್ಕೆ)

## ವೀರಶೈವ ಪುಣ್ಯಾಶ್ರಮದಲ್ಲಿ ಪ್ರವಚನ



ದಾವಣಗೆರೆ, ಆ.19- ನಗರದ ಬಾಡಾ ಕ್ರಾಸ್ ಬಳಿಯಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಕಳೆದ ವಾರ ಏರ್ಪಡಿಸಿದ್ದ ಲಿಂ. ಪುಟ್ಟರಾಜ ಗವಾಯಿಗಳ ಪ್ರವಚನ ಕಾರ್ಯಕ್ರಮವನ್ನು ಗದುಗಿನ ವೀರೇಶ್ವರ ಪುಣ್ಯಾಶ್ರಮದ ಶ್ರೀ ಕಲ್ಲಯ್ಯಜ್ಜ ಮತ್ತು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿಗಳು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಆಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿ ಸ್ವಾಮಿ, ಸಹ ಕಾರ್ಯದರ್ಶಿ ಜೆ. ಎನ್. ಕರಿಬಸಪ್ಪ, ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು ಮತ್ತಿತರರು ಆಗಮಿಸಿದ್ದರು. ಪುರಾಣ ಪ್ರವಚನವನ್ನು ವೇದಮೂರ್ತಿ ಶಿವಬಸಯ್ಯ ನಡೆಸಿಕೊಟ್ಟರು ಈ ಕಾರ್ಯಕ್ರಮದ ಆರಂಭದಲ್ಲಿ ಆಶ್ರಮದ ಅಂಧ ಮಕ್ಕಳಿಂದ ಪ್ರಾರ್ಥನೆಯಾಯಿತು.

## ಹೆಚ್.ಎಂ. ಸ್ವಾಮಿ ನಿಧನಕ್ಕೆ ಕುರ್ಕಿ ಸಂತಾಪ

ದಾವಣಗೆರೆ, ಆ.19- ಶರಣ ಪಥದಲ್ಲಿ ಬಾಳ ನೌಕೆಯ ಸಾಗಿಸುತ್ತಾ ಬಂದು, ಶರಣ ಧರ್ಮವ ನಡೆನುಡಿಯನ್ನಾಗಿಸಿಕೊಂಡಿದ್ದ ಹೆಚ್.ಎಂ. ಸ್ವಾಮಿ ಅವರ ನಿಧನಕ್ಕೆ ಸಾಹಿತಿ ಶಿವಕುಮಾರಸ್ವಾಮಿ ಕುರ್ಕಿ ಸಂತಾಪ ಸೂಚಿಸಿದ್ದಾರೆ.


ಹುಟ್ಟುಹಬ್ಬದ ಶುಭಶಯಗಳು



ಇಂದು ತಮ್ಮ 61ನೇ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಶಿರಮಗೊಂಡನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಮಾಜಿ ಅಧ್ಯಕ್ಷರೂ ಹಾಗೂ ಹಾಲಿ ನಿರ್ದೇಶಕರು, ಬಣಜಿಗ ಸಂಘದ ಮಾಜಿ ಅಧ್ಯಕ್ಷರಾದ

ರಾಯಪ್ಪ ಶಂಭುಲಿಂಗಪ್ಪ

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

ಶುಭ ಕೋರುವವರು:

- ಎಸ್.ಎ. ರವೀಂದ್ರನಾಥ್ – ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರು, ಮಾಜಿ ಸಚಿವರು,
- ಬಸವರಾಜಪ್ಪ ನೀಲಳ – ಬಿಜೆಪಿ ಮುಖಂಡರು ಹಾಗೂ ಬಣಜಿಗ ಸಂಘದ ಮಾಜಿ ಅಧ್ಯಕ್ಷರು
- ಬಣಜಿಗ ಸಂಘದ ಸರ್ವ ಸದಸ್ಯರು, ಬಂಧುಗಳು, ಮಿತ್ರರು
- ಎ.ಎಂ. ಮಂಜುನಾಥ, ಬಿಜೆಪಿ ರೈತ ಮೋರ್ಚಾ ಅಧ್ಯಕ್ಷರು
- ವಿ.ಎಸ್.ಎಸ್.ಎನ್ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಶಿರಮಗೊಂಡನಹಳ್ಳಿ ಗ್ರಾಮಸ್ಥರು

ಇಂದು ಶುಭಾರಂಭ

ಸ್ಟೀಮ್ ವಾಷ್ ಆನ್ ವ್ಹೀಲ್ಸ್




ನಿಮ್ಮ ಮನೆ ಬಾಗಿಲಿಗೆ ಹಬೆಯಿಂದ ವಾಹನ ತೊಳೆಯುವ ಸೌಲಭ್ಯ



ದಿನಾಂಕ 20-08-2021 ನೇ ಶುಕ್ರವಾರ ಬೆಳಿಗ್ಗೆ 10:30 ಕ್ಕೆ

ಸ್ಥಳ : # 571/1A, 1ನೇ ಮೇನ್, 3ನೇ ಕ್ರಾಸ್, ಶಿವಕುಮಾರಸ್ವಾಮಿ ಬಡಾವಣೆ, 1ನೇ ಹಂತ, ದಾವಣಗೆರೆ.

ದಾವಣಗೆರೆ ಮಹಾನಗರ ಪಾಲಿಕೆ ಮಹಾಪೌರರಾದ ಶ್ರೀಯುತ ಎಸ್.ಟಿ. ವೀರೇಶ್ ಅವರು 'ಸ್ಟೀಮ್ ವಾಷ್ ಆನ್ ವ್ಹೀಲ್ಸ್'ಗೆ ಚಾಲನೆ ನೀಡುವರು.





ನರೇಂದ್ರಕುಮಾರ್ – ಬಿಜೆಪಿ ಮುಖಂಡರು

ಶ್ರೀಮತಿ ಸೌಮ್ಯ ನರೇಂದ್ರಕುಮಾರ್ – ಮಾಜಿ ಉಪಮಹಾಪೌರರು ಹಾಗೂ ಸದಸ್ಯರು ಮಹಾನಗರ ಪಾಲಿಕೆ, ದಾವಣಗೆರೆ.

ತಮ್ಮೆಲ್ಲರಿಗೂ ಆತ್ಮೀಯ ಸ್ವಾಗತ ಬಯಸುವವರು :

BALAGA ENTERPRISES
Steam Wash on Wheels Door step Service
# 571/1A,
1st Main, 3rd Cross
Shivakumar Swamy
Badavane, 1st Stage,
Davangere.
9759756655
9900274229




ಕರ್ನಾಟಕ ರಾಜಧಾನಿ ಬೆಂಗಳೂರು ರೀತಿಯಲ್ಲಿಯೇ ದಾವಣಗೆರೆಯಲ್ಲಿಯೂ ಸೇವೆ ಲಭ್ಯ

# ಬಾಯಿ ರೋಗಶಾಸ್ತ್ರ ಶೃಂಗ ಸಭೆಗೆ ಬಾಪೂಜಿ ದಂತ ವೈದ್ಯ ವಿದ್ಯಾರ್ಥಿಗಳು



ದಾವಣಗೆರೆ, ಆ.19- 2021 ರ ಏಪ್ರಿಲ್‌ನಲ್ಲಿ ಎಸ್.ಆರ್.ಎಂ. ಕೆಟ್ಟಿಂಕುಳತ್ತೂರು ದಂತ ವೈದ್ಯಕೀಯ ವಿದ್ಯಾಲಯ ಮತ್ತು ಆಸ್ಪತ್ರೆಯ ವತಿಯಿಂದ ಚೆನ್ನೈನಲ್ಲಿ ನಡೆದ ರಾಷ್ಟ್ರೀಯ ಬಾಯಿ ರೋಗಶಾಸ್ತ್ರ ಶೃಂಗಸಭೆಯಲ್ಲಿ ನಗರದ ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ವಿದ್ಯಾರ್ಥಿಗಳು ಬಹುಮಾನ ಗಳಿಸಿದ್ದಾರೆ.

ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಮೂರನೆ ವರ್ಷದ ಪದವಿಪೂರ್ವ ವಿದ್ಯಾರ್ಥಿಗಳು ವೈಜ್ಞಾನಿಕ ಅನ್ವೇಷಣಾ ವಿಷಯ ಮಂಡನೆಯಲ್ಲಿ ದ್ವಿತೀಯ ಹಾಗೂ ತೃತೀಯ ಬಹುಮಾನ ಪಡೆದಿರುತ್ತಾರೆ. ಬಾಯಿಯ ಆರೋಗ್ಯ ಎಂಬ ಪ್ರಚಾರ ಮಂಡನೆಯಲ್ಲಿ ದ್ವಿತೀಯ ಬಹುಮಾನ ಗಳಿಸಿರುತ್ತಾರೆ.

ಈ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಜಿ.ಜೆ. ಚಿನ್ಮಯ, ಸೂರಜ್ ದಾಸ್, ಶಿಫಾಲಿ ಮಾರುತಿ ನಾಯಕ್ ಹಾಗೂ ವಿ.ಹೆಚ್. ಯೋಗಿತಾ ಅವರಿಗೆ ಬಾಪೂಜಿ ಸಂಸ್ಥೆಯ ಆಡಳಿತ ವರ್ಗ ಬಾಪೂಜಿ ದಂತ ವೈದ್ಯಕೀಯ ನಿರ್ದೇಶಕ ಡಾ. ಕೆ. ಸದಾಶಿವ ಶೆಟ್ಟಿ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# ಆತ್ಮಹತ್ಯೆಗೆ ಯತ್ನಿಸಿದ ಮಹಿಳೆಯ ರಕ್ಷಿಸಿದ 112 ತುರ್ತು ಪೊಲೀಸರು



ದಾವಣಗೆರೆ, ಆ.19- ಪತಿಯ ಕಿರುಕುಳ ಹಿನ್ನಲೆಯಲ್ಲಿ ಮನನೊಂದು ಆತ್ಮಹತ್ಯೆಗೆ ಯತ್ನಿಸಿದ ಮಹಿಳೆಯೋರ್ವಳ ಪ್ರಾಣವನ್ನು ಇಲ್ಲಿನ 112 ತುರ್ತು ಪೊಲೀಸರು ರಕ್ಷಿಸಿದ್ದಾರೆ.

ಸುಮಾರು ಐದು ವರ್ಷಗಳಿಂದ ಪತಿಯು ಪ್ರತಿ ದಿನ ಕುಡಿದು ಬಂದು ಅವಾಚ್ಯವಾಗಿ ಬೈದಾಡಿ ಗಲಾಟೆ ಮಾಡುವುದಕ್ಕೆ ಮನನೊಂದ ಮಹಿಳೆಯು ಆತ್ಮಹತ್ಯೆ ಮಾಡಿಕೊಳ್ಳುವ ಸಲುವಾಗಿ ಉಕ್ಕಡಗಾತ್ರಿ ಗ್ರಾಮದ ತುಂಗಭದ್ರಾ ನದಿ ತೀರಕ್ಕೆ ಬಂದಿದ್ದಳು. ಈ ಬಗ್ಗೆ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ 112 ತುರ್ತು ಪೊಲೀಸರು ಆತ್ಮಹತ್ಯೆಗೆ ಪ್ರಯತ್ನಿಸಿದ ನೊಂದ ಮಹಿಳೆಯ ಜೀವ ರಕ್ಷಿಸಿ, ಮಲೇಬೆನ್ನೂರು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಮುಂದಿನ ಕ್ರಮಕ್ಕೆ ಮಲೇಬೆನ್ನೂರು ಠಾಣೆಯ ಠಾಣಾಧಿಕಾರಿಗಳಿಗೆ ಒಪ್ಪಿಸಲಾಗಿದೆ.

# ನಗರದಲ್ಲಿಂದು ಶ್ರವಣದೋಷ ತಪಾಸಣೆ

ಲಯನ್ಸ್ ಕ್ಲಬ್ ಮತ್ತು ಲಯನ್ಸ್ ಕ್ವೆಸ್ಟ್ ಸ್ಪೀಚ್ ಅಂಡ್ ಹಿಯರಿಂಗ್ ಸೆಂಟರ್ ಇವರ ಸಂಯುಕ್ತಾಶ್ರಯದಲ್ಲಿ ಉಚಿತ ಶ್ರವಣ ಯಂತ್ರ ವಿತರಣೆ ಹಾಗೂ ಶ್ರವಣ ದೋಷ ಉಚಿತ ತಪಾಸಣಾ ಶಿಬಿರವು ವಿರಕ್ತ ಮಠದಲ್ಲಿ ಇಂದು ಬೆಳಿಗ್ಗೆ 11.30ಕ್ಕೆ ನಡೆಯಲಿದೆ. ಶ್ರೀ ಬಸವಪ್ರಭು ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ಎಸ್.ಓಂಕಾರಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ದಿನೇಶ್ ಕೆ. ಶೆಟ್ಟಿ, ಎ.ನಾಗರಾಜ, ಡಾ|| ಟಿ.ವಿ. ಸುಬ್ಬುರಾಜ್ ಪಾಲ್ಗೊಳ್ಳಲಿದ್ದಾರೆ.

# ಛಾಯಾಗ್ರಾಹಕರ ವೃತ್ತಿ ವಿಶಿಷ್ಟ, ಮೌಲ್ಯಯುತವಾದದ್ದು: ಡಿಸಿ

ದಾವಣಗೆರೆ, ಆ. 19 - ಛಾಯಾಗ್ರಾಹಕರ ವೃತ್ತಿ ವಿಶಿಷ್ಟ ಹಾಗೂ ಮೌಲ್ಯಯುತವಾದ ವೃತ್ತಿ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದರು.

ಜಿಲ್ಲಾ ಛಾಯಾಗ್ರಾಹಕರ ಸಂಘ ಹಾಗೂ ಜಿಲ್ಲಾ ಅಖಿಲ ಕರ್ನಾಟಕ ರವಿಚಂದ್ರನ್ ಅಭಿಮಾನಿಗಳ ಸಂಘದ ವತಿಯಿಂದ ನಗರದ ರೋಟರಿ ಬಾಲಭವನದಲ್ಲಿ ಇಂದು ಏರ್ಪಾಡಾಗಿದ್ದ 182ನೇ ವಿಶ್ವ ಛಾಯಾಗ್ರಹಣ ದಿನಾಚರಣೆ, ತಾಲ್ಲೂಕು ಫೋಟೋ ಮತ್ತು ವಿಡಿಯೋ ಗ್ರಾಫರ್ಸ್ ಸಂಘದ 9ನೇ ವರ್ಷದ ವಾರ್ಷಿಕೋ ತ್ಸವ ಕಾರ್ಯಕ್ರಮ ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೊಬೈಲ್‌ಗಳು ಬಂದಾಗಿನಿಂದ ಛಾಯಾಗ್ರಾಹಕ ವೃತ್ತಿಗೆ ಪೆಟ್ಟು ಬಿದ್ದಿದೆ. ಇಂತಹ ಸಂದರ್ಭದಲ್ಲೂ ತಮ್ಮ ವೃತ್ತಿಯನ್ನು ಪೋಷಿಸಿಕೊಂಡು ಬರುತ್ತಿರುವ ಛಾಯಾಗ್ರಾ ಹಕರು ಅಭಿನಂದನೆಗೆ ಅರ್ಹರು ಎಂದರು.



ಕಾಯಕ ಯಾವುದೇ ಇರಲಿ. ಶ್ರದ್ಧೆಯಿಂದ ಮಾಡಿದರೆ ದೇವರನ್ನು ಕಾಣಲು ಸಾಧ್ಯ ಎಂದ ಜಿಲ್ಲಾಧಿಕಾರಿ, ಕೊರೊನಾ ದಿನಗಳಲ್ಲಿ ತಮ್ಮ ವೈಯಕ್ತಿಕ ಜೀವನದ ರಕ್ಷಣೆ ಜೊತೆ ಕಾಯಕ ಮಾಡಿಕೊಂಡು ಹೋಗಬೇಕೆಂದು ಛಾಯಾಗ್ರಾಹಕರಿಗೆ ಕಿವಿ ಮಾತು ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಇಂದಿನ ಸಿಹಿ ಘಟನೆಗಳನ್ನು ನಾಳೆಯ ಸವಿ ನೆನಪುಗಳನ್ನಾಗಿಸುವ ಫೋಟೋ ಗ್ರಾಫರ್ ಗಳು ಪ್ರತಿಯೊಬ್ಬರ ಜೀವನದಲ್ಲೂ ಮಹತ್ವದ ಪಾತ್ರ ವಹಿಸುತ್ತಾರೆ. ಇತ್ತೀಚೆಗೆ ರಾಜಕಾರಣಿಗಳಿಗೆ, ಪ್ರತಿಭಟನಾಕಾರರಿಗೆ ಫೋಟೋ ಗ್ರಾಫರ್‌ಗಳು ಅತಿ ಮುಖ್ಯವಾಗಿ ಬೇಕಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಛಾಯಾಗ್ರಾಹಕ ವೃತ್ತಿಯಲ್ಲಿ ವಿಶ್ವ ದಾಖಲೆ ಮಾಡಿದ ಅನೇಕರಿದ್ದಾರೆ. ಬೆಲೆ ಕಟ್ಟಲಾಗದ ಹಳೆಯ ಫೋಟೋಗಳು ಇವೆ. ಫೋಟೋಗ್ರಫಿ ಹವ್ಯಾಸವಿದ್ದವರಿಗೆ ಸೂಕ್ತ ತರಬೇತಿ ಸಿಕ್ಕರೆ ಈ ವೃತ್ತಿಯಲ್ಲಿ ಸಾಧನೆ ಮಾಡಬಹುದು ಎಂದು ಅಭಿಪ್ರಾಯಪಟ್ಟರು.

ಉದ್ಯಮಿ ಲೋಕಿಕೆರೆ ನಾಗರಾಜ್ ಮಾತನಾಡಿ, ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗ ಫೋಟೋಗ್ರಫಿ. ಆದರೆ ಕಳೆದ ಎರಡು ವರ್ಷಗಳಿಂದ ಛಾಯಾಗ್ರಾಹಕರ ಸ್ಥಿತಿ ಶೋಚನೀಯವಾಗಿದೆ ಎಂದು ಹೇಳಿದರು.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಆರ್. ಎನ್. ಪಾಟೀಲ್, ಜಿ.ಮಂಜುನಾಥ್, ಎಸ್. ಎಲ್. ಆನಂದಪ್ಪ ಹಾಗು ಇತರರು ವೇದಿಕೆ ಮೇಲಿದ್ದರು.

# ಬಾಲ್ಯ ವಿವಾಹ ತಡೆಗೆ ಕಠಿಣ ಕ್ರಮ ಜರುಗಿಸಲು ಡಿಸಿ ಸೂಚನೆ

(3ನೇ ಪುಟದಿಂದ) ಜಿಲ್ಲಾಧಿಕಾರಿಗಳು ಪ್ರತಿಕ್ರಿಯಿಸಿ, ಎಲ್ಲ 141 ಗರ್ಭಿಣಿಯರಿಗೆ ಸಂಬಂಧಿಸಿದ ಮಾಹಿತಿಯನ್ನು ಆರೋಗ್ಯ ಇಲಾಖೆಯಿಂದ ಪಡೆದು, ಪ್ರತಿಯೊಂದು ಪ್ರಕರಣಗಳ ಬಗ್ಗೆ ಪರಿಶೀಲನೆ ನಡೆಸಿ, ಕೇಸ್ ದಾಖಲಿಸುವಂತೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಕಳೆದ ವರ್ಷ ಕೌಟುಂಬಿಕ ಹಿಂಸೆ ಅನುಭವಿಸಿದ ಒಟ್ಟು 44 ಮಹಿಳೆಯ ರನ್ನು ಸಂರಕ್ಷಿಸಲಾಗಿದ್ದು, ಅಂತಹವರಿಗೆ ಜಿಲ್ಲೆಯ ಎರಡು ಸ್ವಾಧಾರ ಗೃಹಗಳಲ್ಲಿ ರಕ್ಷಣೆ ನೀಡಿ ಪುನರ್ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಲ್ಲಿ 11 ಪ್ರಕರಣಗಳು ನ್ಯಾಯಾಲಯದಲ್ಲಿದ್ದು, 19 ಪ್ರಕರಣಗಳು ಸಂರಕ್ಷಣಾಧಿಕಾರಿಗಳ ಬಳಿ ಬಾಕಿ ಇವೆ. ಈ ವರ್ಷ ಒಟ್ಟು 20 ಪ್ರಕರಣಗಳು ವರದಿ ಯಾಗಿದ್ದು, 14 ಪ್ರಕರಣಗಳು ಸಂರಕ್ಷಣಾಧಿಕಾರಿ ಗಳ ಬಳಿ ಬಾಕಿ ಇವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ವಿ ಜಯಕುಮಾರ್ ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಗಳು ಬಾಕಿ ಇರುವ ಎಲ್ಲ ಪ್ರಕರಣಗಳನ್ನೂ ನ್ಯಾಯಾಲಯದಲ್ಲಿ ದಾಖಲಿಸುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಆನಂದ್, ಡಿಹೆಚ್‌ಓ ಡಾ. ನಾಗರಾಜ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ರೇಷ್ಮಾ ಕೌಸರ್ ಸೇರಿದಂತೆ ಜಿಲ್ಲಾ ಮಟ್ಟದ ಸಮಿತಿಗಳ ನಾಮನಿರ್ದೇಶಿತ ಸದಸ್ಯರು, ಸಿಡಿಪಿಓ ಗಳು ಉಪಸ್ಥಿತರಿದ್ದರು.

# ಮುಖ್ಯಮಂತ್ರಿಗಳಿಗೆ ವೀರಶೈವ ಮಹಾಸಭಾದಿಂದ ಅಭಿನಂದನೆ



ದಾವಣಗೆರೆ, ಆ.19 - ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಅಖಿಲ ಭಾರತ ವೀರಶೈವ ಮಹಾಸಭಾದಿಂದ ಸಭಾದ ರಾಷ್ಟ್ರೀಯ ಅಧ್ಯಕ್ಷ ಡಾ|| ಶಾಮನೂರು ಶಿವಶಂಕರಪ್ಪನವರ ನೇತೃತ್ವದಲ್ಲಿ ಮುಖ್ಯಮಂತ್ರಿಗಳ ಗೃಹ ಕಛೇರಿಯಲ್ಲಿ ಇಂದು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಸಭಾದ ರಾಜ್ಯಾಧ್ಯಕ್ಷ ಎನ್.ತಿಪ್ಪಣ್ಣ, ಸಚ್ಚಿದಾನಂದ, ರೇಣುಕ ಪ್ರಸನ್ನ, ಮಹಾಸಭಾದ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಮಧುರಾ ಅಶೋಕ್, ರಾಜಲಕ್ಷ್ಮೀ, ದಿನೇಶ್ ಕೆ.ಶೆಟ್ಟಿ ಮತ್ತಿತರರಿದ್ದರು.

# ಮೌಲ್ಯರಹಿತರು ಪ್ರವೇಶಿಸಬಾರದು

## ಫೋಟೋ ಶೂಟ್ ಮೂರ್ಖರು....

**ಬಿಜೆಪಿ ಕಾರ್ಯಕರ್ತರು, ರೈತರು, ನಗರಸಭೆ ಸದಸ್ಯರನೇಕರು ಸನ್ಮಾನ, ಮಾಲಾರ್ಪಣೆ, ಫೋಟೋ ತೆಗೆಯಲು ನಡೆಸಿದ ತಳ್ಳಾಟ-ನೂಕಾಟ, ಪತ್ರಕರ್ತರಿಗೆ ಜಾಗ ಕೊಡದೆ ಹೊರಗೆ ಕಳಿಸುವ ಪ್ರಯತ್ನ ನೋಡಿದ ಸಚಿವ ನಾರಾಯಣಸ್ವಾಮಿ, ಸರ್ಕಾರದ ಸಾಧನೆ ವಿವರಿಸುವ ಈ ಕಾರ್ಯಕ್ರಮದಲ್ಲಿ ಫೋಟೋ ಶೂಟ್ ಮಾಡುವುದು ಮೂರ್ಖತನ ಎಂದು ಸಿಡಿಮಿಡಿಗೊಂಡರು. ನಂತರ ಸಚಿವರನ್ನು ಸಮಾಧಾನ ಮಾಡಿದ ಸಂಸದ ಶಿವಕುಮಾರ ಉದಾಸಿ ಅವರ ಭಾಷಣಕ್ಕೆ ಅನುವು ಮಾಡಿಕೊಟ್ಟರು.**

(3ನೇ ಪುಟದಿಂದ) ಹಾಗೂ ಅಧಿಕಾರ ಹಂಚಿಕೆಯಲ್ಲಿ ಸಾಮಾಜಿಕ ನ್ಯಾಯ ಕೊಟ್ಟವರಲ್ಲಿ ದೇವರಾಜ ಅರಸು ಮೊದಲಿಗರು. ನಂತರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಎಂದು ಸಂಸದ ಶಿವಕು ಮಾರ್ ಉದಾಸಿ ಹೇಳಿ ಎಲ್ಲರನ್ನು ಸ್ವಾಗತಿಸಿದರು.

ಶಾಸಕ ಅರುಣಕುಮಾರ ಪೂಜಾರ್, ನಗರಾಧ್ಯಕ್ಷೆ ರೂಪಾ, ನಗರಸಭೆ ಸದಸ್ಯ ಪ್ರಕಾಶ ಪೂಜಾರ್, ವಾಯುವ್ಯ ಸಾರಿಗೆ ಉಪಾಧ್ಯಕ್ಷ ಡಾ. ಬಸವರಾಜ ಕೇಲ ಗಾರ, ನಿರ್ದೇಶಕ ಸಂತೋಷ್ ಪಾಟೀಲ್ ಇನ್ನಿತರರಿದ್ದರು.

**ಕಾಂಗ್ರೆಸ್ಸಿಗರ ಕಸಿವಿಸಿ :** ಕಾಂಗ್ರೆಸ್ ಆಡಳಿತದ ವೈಖರಿ, ದಲಿತರಿಗಾದ ಅನ್ಯಾಯ ಮುಂತಾದವುಗಳನ್ನು ಸಚಿವ ನಾರಾಯಣ ಸ್ವಾಮಿ ವಿವರಿಸುತ್ತಿದ್ದ ವೇಳೆ ಕಾರ್ಯಕರ್ತರ ಕೂಗಾಟದ ಸ್ಪಂದನೆಯಿಂದಾಗಿ ಸಮಾಜದ ಕರೆಗೆ, ಸಮಾಜ ಬಂಧುವಾಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ತಾ. ಪಂ. ಮಾಜಿ ಅಧ್ಯಕ್ಷ ಕಾಂಗ್ರೆಸ್‌ನ ಮುಖಂಡ ನೀಲಕಂಠಪ್ಪ ಕುಸಗೂರ ಅವರು ಪಕ್ಷ ಹಾಗೂ ಸಮಾಜ ಎರಡನ್ನೂ ಬಿಡದೆ ಕಸಿವಿಸಿಗೊಂಡಂತೆ ಕಂಡುಬಂತು.

## ಸಂಸದರ ಪ್ರವಾಸ

ಸಂಸದ ಸಿದ್ದೇಶ್ವರ ಅವರು ಮಧ್ಯಾಹ್ನ 12 ಗಂಟೆಗೆ ಮಲೇಬೆನ್ನೂರಿನಲ್ಲಿ ನಡೆಯುವ ಜನೌಷಧಿ ಕೇಂದ್ರದ ಉದ್ಘಾಟ ನೆಯಲ್ಲಿ ಪಾಲ್ಗೊಳ್ಳುವರು. 12. 30 ಕ್ಕೆ ಕೊಕ್ಕನೂರಿನ ಆಹಾ ರದ ದಿನಸಿ ಕಿಟ್ ವಿತರಣೆಯಲ್ಲಿ ಪಾಲ್ಗೊಳ್ಳುವರು.

# ಹೆಚ್.ಎಂ.ಎಸ್ ಕಾನ್ವೆಂಟ್ ಶಾಲೆಗೆ ಉತ್ತಮ ಫಲಿತಾಂಶ

ದಾವಣಗೆರೆ, ಆ.19- ನಗರದ ಕಾಯಿಪೇಟೆಯ ದೇವನಗರಿ ಎಜುಕೇಷನ್ ಟ್ರಸ್ಟ್ ಆಶ್ರಯದಲ್ಲಿ ನಡೆಯುತ್ತಿರುವ ಹೆಚ್.ಎಂ.ಎಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗಿದ್ದ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶಾಲೆಗೆ ಶೆ. 100 ರಷ್ಟು ಫಲಿತಾಂಶ ಲಭಿಸಿದೆ.

ಅಮೋಘ ಅರವಿಂದ್ ಪುರುಷನ್ 590 (94.4%), ಎಸ್. ಕೆ. ಕಾರ್ತಿಕ್ 555 (88.8%), ರಜತ್ ಎಸ್.ಶೇಟ್ 531 (84.8%) ಅಂಕಗಳನ್ನು ಪಡೆದಿದ್ದಾರೆ.

ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷೆ ಹೆಚ್.ಎಂ. ಸರೋಜ ಸೋಮನಾಥಯ್ಯ, ಕಾರ್ಯದರ್ಶಿ ಹೆಚ್.ಎಂ ರುದ್ರಮುನಿಸ್ವಾಮಿ, ಆಡಳಿತಾಧಿಕಾರಿ ಶ್ರೀಮತಿ ಹೆಚ್. ಎಂ. ಹೇಮಲತಾ ರುದ್ರಮುನಿಸ್ವಾಮಿ, ಮುಖ್ಯ ಶಿಕ್ಷಕಿ ಶ್ರೀಮತಿ ವೈ. ಶೃತಿ ಅಭಿನಂದಿಸಿದ್ದಾರೆ.

# ನಗರದಲ್ಲಿ ಇಂದು

ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಆಶ್ರಯದಲ್ಲಿ ಶಂಕರವಿಹಾರ ಬಡಾವಣೆಯಲ್ಲಿ ಇಂದು ಮಧ್ಯಾಹ್ನ 12.10 ಕ್ಕೆ ಶ್ರೀ ಅಂಬಾಭವಾನಿ ದೇವಸ್ಥಾನಕ್ಕೆ ಭೂಮಿ ಪೂಜೆ ಸಮಾ ರಂಭ ನಡೆಯಲಿದೆ. ದಿವ್ಯ ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸು ವರು. ರಮೇಶ್ ಪಿ. ಕಾಟ್ವೆ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಜಿ.ಎಂ. ಸಿದ್ದೇಶ್ವರ, ಎಸ್.ಎ. ರವೀಂದ್ರನಾಥ್, ಶಾಮನೂರು ಶಿವಶಂಕರಪ್ಪ, ಮಹಾಂ ತೇಶ್ ಬೀಳಗಿ, ಸಿ.ಬಿ. ರಿಶ್ಯಂತ್, ಎಸ್. ಟಿ. ವೀರೇಶ್, ಶಿವಕುಮಾರ್ ರಾಜನ ಹಳ್ಳಿ, ನಾಗೇಶ್ ಕಲ್ಬುರ್ಗಿ, ಯಶವಂತ ರಾವ್ ಜಾಧವ್, ಶ್ರೀಮತಿ ಆಶಾ ಉಮೇಶ್, ವಿಶ್ವನಾಥ್ ಮುದಜ್ಜಿ, ಶ್ರೀನಿ ವಾಸ್ ಹೆಚ್. ಖೋಡೆ, ಸತ್ಯನಾರಾಯಣ ಡಮಾಮ್, ರಾಮಚಂದ್ರಸಾ ಕಬಾಡೆ, ಡಾ. ಶಶಿಕುಮಾರ ಮೆಹರವಾಡೆ, ನಾರಾಯಣಸಾ ಕೆ. ಭಾಂಡಗೆ, ಅಶೋಕ ಕಾಟ್ವೆ, ಸತೀಶ್ ಜಿ. ಮೆಹರವಾಡೆ, ನೀಲಕಂಠಸಾ ಜಡಿ, ನಾರಾಯಣಸಾ ಖೋಡೆ, ವಿಠ್ಠಲ ಲದ್ವಾ, ಅಶೋಕ ಎನ್. ಲದ್ವಾ, ಬಾಳುಸಾ ಟಿ. ರಂಗ್ರೇಜ್, ಅಶೋಕ ಸಿದ್ಲಿಂಗ್ ಆಗಮಿಸುವರು.

# ಕಾರ್...ಕಾರ್...ಕಾರ್ ಎಲ್ನೋಡಿ ಕಾರ್ !

(3ನೇ ಪುಟದಿಂದ) ಹಾಗೂ ಹೊರ ರಾಜ್ಯದ ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದವರು ಲಾಕ್‌ಡೌನ್ ಕಾರಣದಿಂದ 'ವರ್ಕ್ ಫ್ರಂ ಹೋಂ' ನೆಪದಲ್ಲಿ ನಗರದಲ್ಲಿಯೇ ಹಲವು ತಿಂಗಳುಗಳಿಂದ ವಾಸವಾಗಿದ್ದಾರೆ. ಬೇರೆ ಬೇರೆ ನಗರಗಳಲ್ಲಿ ಇವರು ಉಪಯೋಗಿಸುತ್ತಿದ್ದ ಕಾರುಗಳು ಇದೀಗ ದಾವಣಗೆರೆಯಲ್ಲೂ ಓಡಾಡುತ್ತಿವೆ.

ತಮ್ಮಲ್ಲಿದ್ದ ಕಾರುಗಳನ್ನು ಬೆಂಗಳೂರಿನಂತಹ ಮಹಾನಗರಗಳಲ್ಲಿ ಓಲಾ, ಊಬರ್ ಸೇರಿದಂತೆ ಟ್ಯಾಕ್ಸಿ ಸಂಸ್ಥೆಗಳಲ್ಲಿ ಬಾಡಿಗೆ ಓಡಿಸುತ್ತಿದ್ದರು. ಹಾಗೂ ಬಾಡಿಗೆಗೆ ನೀಡಿದ್ದ ಕೆಲ ವರ್ಗದವರೂ ಸಹ ಕೊರೊನಾದಿಂದ ಸದ್ಯ ಅಷ್ಟಾಗಿ ಅಲ್ಲಿ ದುಡಿಮೆ ಇಲ್ಲದ ಕಾರಣ ಆ ವಾಹನಗಳೂ ನಗರಕ್ಕೆ ಹಿಂತಿರುಗಿವೆ ಎನ್ನಲಾಗುತ್ತಿದೆ.

ಒಟ್ಟಾರೆ ವಸತಿ ಪ್ರದೇಶದ ರಸ್ತೆಗಳಲ್ಲಿ ವಾಹನ ನಿಲುಗಡೆ ನಿರ್ಬಂಧಿಸಲು ಸದ್ಯಕ್ಕೆ ಯಾವುದೇ ನಿಯಮಗಳಿಲ್ಲ. ಆಸ್ತಿ ಮಾಲೀಕರು ತಮ್ಮ ಜಾಗದಲ್ಲೇ ವಾಹನ ನಿಲುಗಡೆಗೆ ಅಗತ್ಯವಿರುವಷ್ಟು ಜಾಗವನ್ನೂ ಮೀಸಲಿಡುವುದು ಕಡ್ಡಾಯ. ಆದರೂ ಇದರ ಪಾಲನೆ ಆಗದಿರುವುದು ಸಮಸ್ಯೆ ಸೃಷ್ಟಿಸಿದೆ.

ಹಾಗಾಗಿ ರಸ್ತೆಯಲ್ಲೇ ವಾಹನ ನಿಲ್ಲಿಸುವ ಪರಿಪಾಠಕ್ಕೆ ಇಂದಲ್ಲದಿದ್ದರೆ ನಾಳೆಯಾದರೂ ಇತಿಶ್ರೀ ಹಾಡಬೇಕಿದೆ. ಈ ರಸ್ತೆಗಳನ್ನು ಸಾರ್ವಜನಿಕ ಉದ್ದೇಶಕ್ಕೆಂದು ಮೀಸಲಿಡಬೇಕಿದೆ. ವಾಹನ ನಿಲ್ಲಿಸಲು ರಸ್ತೆಯನ್ನು ಕಬಳಿಸುವವರು ಇದಕ್ಕೆ ಬೆಲೆ ತೆರಲೇ ಬೇಕು.

ಬೆಂಗಳೂರಿನ ಭೂ ಸಾರಿಗೆ ನಿರ್ದೇಶನಾಲಯ (ಡಲ್ಟ್) ಅಂತಿಮಗೊಳಿಸಿರುವ 'ವಾಹನ ನಿಲುಗಡೆ ನೀತಿ 2.0'ಯಲ್ಲಿ ನಗರದ ನಿವಾಸಿಗಳು ಮನೆ ಬಳಿಯ ರಸ್ತೆಯನ್ನು ತಮ್ಮ ವಾಹನ ನಿಲ್ಲಿಸಲು ಬಳಸಿಕೊಂಡರೆ ಅದಕ್ಕೆ ಶುಲ್ಕ ಪಾವತಿಸಬೇಕು ಎಂಬ ಅಂಶ ಚರ್ಚೆಗೂ ಗ್ರಾಸವಾಗಿತ್ತು. ಮನೆಯ ರಸ್ತೆ ಮುಂದೆ ಬಂದುಹೋ ಗುವ ವಾಹನಗಳಿಗೆ ತೊಂದರೆಯಾಗದಂತೆ ಕಾರ್ ಪಾರ್ಕ್ ಮಾಡಿದರೆ ದಂಡ ವಿಧಿಸುವುದು ಸೂಕ್ತ.

ಮುಂಬರುವ ದಿನಗಳಲ್ಲಿ ಪಾರ್ಕಿಂಗ್‌ಗೆ ಸ್ಥಳವಿದ್ದರೆ ಮಾತ್ರ ವಾಹನ ಖರೀದಿಸಲು ಷರತ್ತು ವಿಧಿಸುವ ಹೊಸ ನೀತಿ-ನಿಯಮಗಳು ಜಾರಿಗೊಳಿಸಬೇಕು. ಇದರಿಂದ ಕಾರುಕೊಳ್ಳುವ ಜನ ಎಚ್ಚೆತ್ತುಕೊಳ್ಳಬಹುದು.

ಅಲ್ಲದೆ, ನಗರಪಾಲಿಕೆ, ಅಭಿವೃದ್ಧಿ ಪ್ರಾಧಿಕಾರ ಪಾರ್ಕಿಂಗ್ ನಿಯಮದಲ್ಲಿ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕಿದೆ. ಈ ವಿಚಾರದಲ್ಲಿ ಈವರೆಗೆ ದಾವಣಗೆರೆ ಅಭಿವೃದ್ಧಿ ಪ್ರಾಧಿಕಾರ, ಮಹಾ ನಗರಪಾಲಿಕೆಗಳು ಲೋಪ ಎಸಗಿವೆ ಎನ್ನದೇ ವಿಧಿಯಿಲ್ಲ. ಈ ಎರಡೂ ಸಂಸ್ಥೆಗಳು ಪ್ರತಿಷ್ಠಿತರು ವಾಸಮಾಡುವ ಬಡಾವಣೆ ಜನತೆಯ 'ಕಾರು ಬಾರ'ನ್ನು ಜಂಟಿಯಾಗಿ ಒಮ್ಮೆ ಕಣ್ಣಾಯಿಸಿ ಬಂದು ಕ್ರಮ ಜರುಗಿಸಲಿ.

# ಪರೀಕ್ಷೆ ರದ್ದತಿಯ ಬಗ್ಗೆ ಅಧಿಕೃತ ಸುತ್ತೋಲೆಗೆ ಆಗ್ರಹ




## ದಾವಣಗೆರೆ ವಿವಿ ಪದವಿ, ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರತಿಭಟನೆ


ದಾವಣಗೆರೆ, ಆ.19- 2 ಮತ್ತು 4ನೇ ಸೆಮಿಸ್ಟರ್ ಪದವಿ ಹಾಗೂ 2ನೇ ಸೆಮಿಸ್ಟರ್ ಸ್ನಾತಕೋತ್ತರ ವಿದ್ಯಾರ್ಥಿಗಳ ಪರೀಕ್ಷೆಯನ್ನು ರದ್ದುಗೊಳಿಸಿದ ಬಗ್ಗೆ ಅಧಿಕೃತವಾಗಿ ಸುತ್ತೋಲೆ ಹೊರಡಿಸುವಂತೆ ದಾವಣಗೆರೆ ವಿಶ್ವವಿದ್ಯಾಲಯಕ್ಕೆ ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಓ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ದಾವಣಗೆರೆ ವಿವಿಯ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ನಗರದಲ್ಲಿಂದು ಪ್ರತಿಭಟನೆ ನಡೆಸಿದರು.

ಜಯದೇವ ವೃತ್ತದಲ್ಲಿ ಕೆಲ ಕಾಲ ಪ್ರತಿಭಟಿಸಿ, ನಂತರ ದಾವಣಗೆರೆ ವಿಶ್ವವಿದ್ಯಾಲಯದ ಉಪಕುಲಪತಿಗಳಿಗೆ ಮನವಿ ಸಲ್ಲಿಸಿದರು.

ದಾವಣಗೆರೆ ವಿಶ್ವವಿದ್ಯಾಲಯದ ಪದವಿ ವಿದ್ಯಾರ್ಥಿಗಳಿಗೆ ಎರಡನೇ ಸೆಮಿಸ್ಟರ್ ಮತ್ತು ನಾಲ್ಕನೇ ಸೆಮಿಸ್ಟರ್ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಎರಡನೇ ಸೆಮಿಸ್ಟರ್‌ನ ಪರೀಕ್ಷೆಗಳನ್ನು ರದ್ದುಗೊಳಿಸುವುದಾಗಿ ದಾವಣಗೆರೆ ವಿವಿ ಕುಲಪತಿಗಳು ವಿದ್ಯಾರ್ಥಿ ಸಂಘಟನೆಯ ಜೊತೆ ಚರ್ಚೆ ಮಾಡಿದಾಗ ಭರವಸೆ ನೀಡಿದ್ದರು. ಈ ಬಗ್ಗೆ ಮಂಗಳವಾರದ ಒಳಗೆ ಅಧಿಕೃತ ಸುತ್ತೋಲೆ ಹೊರಡಿಸುವುದಾಗಿಯೂ ತಿಳಿಸಿದ್ದರು. ಆದರೆ ಯಾವುದೇ ಸುತ್ತೋಲೆ ಇನ್ನೂ ಹೊರಡಿಸಿಲ್ಲ. ಇದು ವಿದ್ಯಾರ್ಥಿಗಳಲ್ಲಿ ಆತಂಕವನ್ನುಂಟು ಮಾಡಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ದಾವಣಗೆರೆ ವಿಶ್ವವಿದ್ಯಾಲಯವು ಕೇಂದ್ರ ಸರ್ಕಾರದ ಯುಜಿಸಿ ಮಾರ್ಗಸೂಚಿಯನ್ನು ಹಾಗೂ ರಾಜ್ಯ ಸರ್ಕಾರ ಹೊರಡಿಸಿರುವ ನಿರ್ದೇಶನವನ್ನು ಕಾರ್ಯ ರೂಪಕ್ಕೆ ತಂದಿಲ್ಲ. ಈ ಕೂಡಲೇ ಯಾವುದೇ ವಿಳಂಬವಿಲ್ಲದೆ ಪರೀಕ್ಷಾ ರದ್ದತಿಯ ಕುರಿತಾಗಿ ಸುತ್ತೋಲೆ ಹೊರಡಿಸಿ, ಯುಜಿಸಿ ಹಾಗೂ ರಾಜ್ಯ ಸರ್ಕಾರದ ಮಾರ್ಗಸೂಚಿಯನ್ನು ಕೂಡಲೇ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ, ಜಂಟಿ ಕಾರ್ಯದರ್ಶಿ ಕಾವ್ಯ, ಜಿಲ್ಲಾ ಸಮಿತಿ ಸದಸ್ಯೆ ಪುಷ್ಪ ಸೇರಿದಂತೆ ವಿದ್ಯಾರ್ಥಿಗಳು, ಸಂಘಟನೆ ಪದಾಧಿಕಾರಿಗಳು ಭಾಗವಹಿಸಿದ್ದರು.

ನಾಡಿನ ಸಮಸ್ತ ಜನತೆಗೆ ವರಮಹಾಲಕ್ಷ್ಮಿ ಹಬ್ಬದ ಹಾರ್ದಿಕ ಶುಭಾಷಯಗಳು




29 ವರ್ಷಗಳ ಸಾರ್ಥಕ ಸಂಭ್ರಮ

ವರಮಹಾಲಕ್ಷ್ಮಿ ಹಬ್ಬದ ಶುಭ ದಿನದಂದು ಪ್ರಾರಂಭವಾದ ನಮ್ಮ ಸಂಸ್ಥೆ

ಗುಂಡಾಲ್ ಬ್ಯುಸಿನೆಸ್ ಡಾಟಾ ಸಲ್ಯೂಷನ್ಸ್


ಮಹಾಲಕ್ಷ್ಮಿಯ ಕೃಪೆಯಿಂದ ಇಂದು ಸಾರ್ಥಕ 29 ವರ್ಷಗಳನ್ನು ಪೂರೈಸಿ 30ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದೆ. ಈ ಶುಭ ಸಂದರ್ಭದಲ್ಲಿ ನಮ್ಮ ಸಂಸ್ಥೆ ಯಶಸ್ವಿಯಾಗಿ ಮುನ್ನಡೆಯಲು ಪ್ರೋತ್ಸಾಹಿಸಿದ ಕರ್ನಾಟಕ, ಓರಿಸ್ಸಾ ಹಾಗೂ ಆಂಧ್ರ ರಾಜ್ಯದ ಚುನಾವಣಾ ಆಯೋಗದ ಅಧಿಕಾರಿಗಳಿಗೆ, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ, ಉಪವಿಭಾಗಾಧಿಕಾರಿಗಳಿಗೆ, ತಹಶೀಲ್ದಾರ್ ಅವರಿಗೆ, ಪೊಲೀಸ್ ವರಿಷ್ಠಾಧಿಕಾರಿಗಳಿಗೆ, ಮಹಾನಗರ ಪಾಲಿಕೆ ಮಹಾಪೌರರಿಗೆ, ಆಯುಕ್ತರಿಗೆ, ಮಾರ್ಗದರ್ಶನ ನೀಡಿದ ಎಲ್ಲಾ ಹಿರಿಯರಿಗೆ, ಸ್ನೇಹಿತರಿಗೆ, ಕಚೇರಿಯ ಸಿಬ್ಬಂದಿ ವರ್ಗದವರಿಗೆ, ಹಿತೈಷಿಗಳಿಗೆ, ಅಭಿಮಾನಿಗಳಿಗೆ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ

ನನ್ನ ಹೃದಯ ತುಂಬಿದ ಕೃತಜ್ಞತೆಗಳು.




ಗುಂಡಾಲ್ ಮಂಜುನಾಥ್
ಸಿಇಓ
ಗುಂಡಾಲ್ ಗ್ರೂಪ್ ಆಫ್ ಕಂಪನೀಸ್

* ಗುಂಡಾಲ್ ಬ್ಯುಸಿನೆಸ್ ಡಾಟಾ ಸಲ್ಯೂಷೆನ್ಸ್
* ಗುಂಡಾಲ್ ಬ್ಯುಸಿನೆಸ್ ಡಾಟಾ ಸಲ್ಯೂಷೆನ್ಸ್ ಪ್ರೈ. ಲಿ.,
* ಗುಂಡಾಲ್ ಇನ್ಫೋಟೆಕ್ ಪ್ರೈ. ಲಿ.,
* ಶಿಂಷಾ ಫೌಂಡೇಷನ್ (ರಿ.,)
* ದೇವನಗರಿ ಸ್ಯಾರೀಸ್ ಅಂಡ್ ಜ್ಯೂಯಲ್ಸ್
* ಜಿ-ಕನೆಕ್ಟ್ ಇ ಸರ್ವೀಸಸ್
* ಜಿಎಂ ಬ್ಯುಸಿನೆಸ್ ಡಾಟಾ ಸಲ್ಯೂಷೆನ್ಸ್



## ನಗರದಲ್ಲಿ ಇಂದು ರಾಜೀವ್, ಅರಸು ಜನ್ಮದಿನಾಚರಣೆ



ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಮಾಜಿ ಪ್ರಧಾನಮಂತ್ರಿ ದಿ|| ರಾಜೀವ್‌ಗಾಂಧಿ ಮತ್ತು ಮಾಜಿ ಮುಖ್ಯಮಂತ್ರಿ ದಿ|| ದೇವರಾಜ ಅರಸು ಅವರುಗಳ ಜನ್ಮ ದಿನಾಚರಣೆಯು ಇಂದು ನಡೆಯಲಿದೆ.

ಬೆಳಿಗ್ಗೆ 11 ಕ್ಕೆ ಕಾಂಗ್ರೆಸ್ ಕಛೇರಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## ಮಲೇಬೆನ್ನೂರು ಪಿಎಸ್‌ಐ ಆಗಿ ರವಿಕುಮಾರ್



ಮಲೇಬೆನ್ನೂರು, ಆ.19 - ಇಲ್ಲಿನ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿ ಮುದಹದಡಿಯ ರವಿಕುಮಾರ್ ಇಂದು ಅಧಿಕಾರ ವಹಿಸಿಕೊಂಡರು.

ರವಿಕುಮಾರ್ ಇದುವರೆಗೆ ಹರಿಹರ ಗ್ರಾಮಾಂತರದಲ್ಲಿದ್ದರು. ಇಲ್ಲಿದ್ದ ಪಿಎಸ್‌ಐ ವೀರಬಸಪ್ಪ ಕುಸಲಾಪುರ ಅವರು ಹರಿಹರ ಗ್ರಾಮಾಂತರ ಠಾಣೆಯಲ್ಲಿ ಅಧಿಕಾರ ವಹಿಸಿಕೊಂಡಿದ್ದಾರೆ.

## ದುರ್ಗಾಂಬಿಕಾ ಶಾಲೆಗೆ ಶೇ.100

ದಾವಣಗೆರೆ, ಆ.19- ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೊಂಡದ ರಸ್ತೆ ಶ್ರೀ ದುರ್ಗಾಂಬಿಕಾ ಸಂಯುಕ್ತ ಪ್ರೌಢಶಾಲೆಗೆ ಶೇ. 100 ಫಲಿತಾಂಶ ಲಭಿಸಿದೆ ಎಂದು ಶಾಲೆಯ ಮುಖ್ಯ ಶಿಕ್ಷಕರು ತಿಳಿಸಿದ್ದಾರೆ.

ವಾಸ್ತು ಗಿಡ

ಈಗಾಗಲೇ 25,000ಕ್ಕೂ ಹೆಚ್ಚು ಕುಟುಂಬಗಳು ನೆಮ್ಮದಿಯ ಬದುಕನ್ನು ಕಂಡ ಉಪ್ಪಿನಂಗಡಿ ಡಾ. ಕೈಲಾರ್ ರಾಜಗೋಪಾಲ್ ಭಟ್ ಇವರು ಶ್ರೀ ಮಹಾಗಣಪತಿಯನ್ನು ಪೂಜಿಸಿಕೊಡುವ 'ವಾಸ್ತು ಗಿಡ'ವನ್ನು ಪಡೆಯಲು ಫೋನ್ ಮಾಡಿ ಬನ್ನಿ. ಕೋರಿಯರ್ ಮೂಲಕವೂ ಪಡೆಯಬಹುದು.

ಫೋ. : 94480 41693, 70262 63335, ವಾಟ್ಸಾಪ್ : 99862 21860

www. kailaravaasthugida.com


|| ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ||

ಶುಭಾರಂಭ

ನಿತೀಶ್ ಆಪ್ಟಿಕಲ್ ಸೆಂಟರ್

3ನೇ ಮುಖ್ಯರಸ್ತೆ, ಮಾಮಾಸ್ ಜಾಯಿಂಟ್ ರೋಡ್, ಶಿಲ್ಪಾ ಡಯಾಗ್ನೋಸ್ಟಿಕ್ ಹಾಸ್ಪಿಟಲ್ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ-577 004.



Computerized eye testing

ದಿನಾಂಕ : 20.08.2021ನೇ ಶುಕ್ರವಾರ

ಪೂಜಾ ಸಮಯ : ಬೆಳಿಗ್ಗೆ 9.00 ರಿಂದ 10.30 ರವರೆಗೆ.

ಉದ್ಘಾಟನೆ :

ಪೂಜ್ಯ ಶ್ರೀ ಷ|| ಬ್ರ|| ಓಂಕಾರ ಶಿವಾಚಾರ್ಯ ಸ್ವಾಮೀಜಿ ಪುರವರ್ಗ ಮಠ, ಆವರಗೊಳ್ಳ.

ಶ್ರೀ ಕೊಟ್ರಯ್ಯ ಸ್ವಾಮೀಜಿ, ಶಿಂಗ್ರಿಹಳ್ಳಿ.

ತಮ್ಮ ಸುಖಾಗಮನ ಬಯಸುವವರು :

ಕೆ. ಕೊಟ್ರಪ್ಪ ಮತ್ತು ಕುಟುಂಬ ವರ್ಗದವರು

ಡಾ|| ನಿತೀಶ್ ಕೆ., ನಿಶಾಂತ್ ಕೆ. ಮತ್ತು ಸ್ನೇಹಿತರು ಹಾಗೂ ಬಂಧು-ಬಳಗದವರು

ಫೋ. : 98865 91109, 99168 49475, (08192 221168)







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte